# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಮಾರ್ಚ್ 02, 2023

ಸಂಪುಟ : 49 ಸಂಚಿಕೆ : 289 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಸರ್ಕಾರಿ ನೌಕರರಿಗೆ ಶೇ.17ರಷ್ಟು ವೇತನ ಹೆಚ್ಚಳ

**ಹಳೆ ಪಿಂಚಣಿ ಸಮಿತಿ ಭರವಸೆ**

**ಅರ್ಧ ದಿನಕ್ಕೇ ಮುಷ್ಕರ ಮುಕ್ತಾಯ**

ಬೆಂಗಳೂರು, ಮಾ. 1 - ರಾಜ್ಯ ಸರ್ಕಾರಿ ನೌಕರರಿಗೆ ಮಧ್ಯಂತರ ಪರಿಹಾರವಾಗಿ ಶೇಕಡ 17 ರಷ್ಟು ವೇತನ ಹೆಚ್ಚಳ ಮಾಡಿ, ಆದೇಶ ಹೊರಡಿಸಲಾಗಿದೆ.

ಸರ್ಕಾರಿ ನೌಕರರ ಮುಷ್ಕರಕ್ಕೆ ಮಣಿದ ರಾಜ್ಯ ಸರ್ಕಾರ ಮಧ್ಯಂತರ ಪರಿಹಾರ ನೀಡಿದ್ದಲ್ಲದೆ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಹಳೇಯ ಪಿಂಚಣಿ ಯೋಜನೆಗೆ ಮರು ಜಾರಿ ಮಾಡುವ ಸಂಬಂಧ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚನೆ ಮಾಡಿದೆ.

ತಮ್ಮ ಬೇಡಿಕೆಗಳಿಗೆ ಸರ್ಕಾರ ಮಣಿಯುತ್ತಿದ್ದಂತೆ ನೌಕರರು ಮುಷ್ಕರವನ್ನು ಹಿಂದಕ್ಕೆ ಪಡೆದು, ಕೆಲಸಕ್ಕೆ ಹಾಜರಾಗುವ ತೀರ್ಮಾನ ಪ್ರಕಟಿಸಿದರು. ಬುಧವಾರದಿಂದ ಅನಿರ್ದಿಷ್ಟ ಅವಧಿಗೆ ಮುಷ್ಕರ ನಡೆಸುವುದಾಗಿ ನೌಕರರ ಸಂಘಟನೆ ತಿಳಿಸಿತ್ತು. ಆದರೆ, ಸರ್ಕಾರದ ಜೊತೆ ನಡೆಸಿದ ಸಂಧಾನಕ್ಕೆ ಸಮ್ಮತಿಸಿ, ಮುಷ್ಕರ ಆರಂಭಿಸಿದ ಗಂಟೆಗಳಲ್ಲೇ ಪ್ರತಿಭಟನೆ ನಿಲ್ಲಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ತಮ್ಮ ಸರ್ಕಾರಿ ನಿವಾಸದಲ್ಲಿ ಮುಷ್ಕರ ನಿರತ ಸಂಘದ ಪದಾಧಿಕಾರಿಗಳ ಜೊತೆ ಸುದೀರ್ಘ ಸಮಾಲೋಚನೆ ನಡೆಸಿ, ಎರಡು ಬೇಡಿಕೆಗಳನ್ನು ತಾತ್ಕಾಲಿಕವಾಗಿ ಈಡೇರಿಸುವ ತೀರ್ಮಾನ ಪ್ರಕಟಿಸುತ್ತಿದ್ದಂತೆ ನೌಕರರು ಮುಷ್ಕರದಿಂದ ಹಿಂದೆ ಸರಿದರು.

ಮಾತುಕತೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು, ನೌಕರರಿಗೆ ಮಧ್ಯಂತರ ಪರಿಹಾರವಾಗಿ ಶೇಕಡ 17 ರಷ್ಟು ವೇತನ (3ನೇ ಪುಟಕ್ಕೆ)

## ಮುಷ್ಕರದ ಕರೆಗೆ ನೌಕರರಿಂದ ಉತ್ತಮ ಸ್ಪಂದನೆ



ದಾವಣಗೆರೆ, ಮಾ.1- ವೇತನ ಪರಿಷ್ಕರಣೆ ಹಾಗೂ ಹಳೆ ಪಿಂಚಣಿ ಯೋಜನೆಗೆ ಒತ್ತಾಯಿಸಿ ಸರ್ಕಾರಿ ನೌಕರರು ಬುಧವಾರ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಮುಷ್ಕರ ನಡೆಸಿದರು. ಬೆಳಿಗ್ಗೆ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗಿದ್ದ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಸರ್ಕಾರ ಬೇಡಿಕೆಗೆ ಸ್ಪಂದಿಸಿದ ಹಿನ್ನೆಲೆಯಲ್ಲಿ ಮಧ್ಯಾಹ್ನ ನೌಕರರ ಸಂಘದ ರಾಜ್ಯಾಧ್ಯಕ್ಷರು ಮುಷ್ಕರ ಹಿಂಪಡೆದು ಕೇಂದ್ರ ಸ್ಥಾನದಲ್ಲಿದ್ದವರು ಕೆಲಸಕ್ಕೆ ಹಾಜರಾಗುವಂತೆ ಕರೆ ನೀಡಿದ್ದರಾದರೂ, ಈ ಕರೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿರಲಿಲ್ಲ.

ಮುಷ್ಕರ 'ಸರ್ಕಾರಿ ನೌಕರರಿಗೆ ಮಜಾ ಜನ ಸಾಮಾನ್ಯರಿಗೆ ಸಜಾ' ಎಂಬಂತೆ ಕಂಡು ಬಂದಿದ್ದು ಚಿಗಟೇರಿ ಜಿಲ್ಲಾಸ್ಪತ್ರೆ ಆವರಣದಲ್ಲಿ.

ಮುಷ್ಕರದ ಹಿನ್ನೆಲೆಯಲ್ಲಿ ಆಸ್ಪತ್ರೆಯ ಹೊರ ರೋಗಿಗಳ ವಿಭಾಗ ತೆರೆದಿರಲಿಲ್ಲ. ಸರ್ಕಾರಿ ವೈದ್ಯರು, ನರ್ಸ್‌ಗಳು ಸೇರಿದಂತೆ ಇತರೆ ನೌಕರರೆಲ್ಲ ಕೆಲಸಕ್ಕೆ ಗೈರು ಹಾಜರಾಗಿದ್ದರು. ಇದಾವುದರ ಪರಿವೆಯೇ ಇಲ್ಲದಂತೆ ನಗರ ಸೇರಿದಂತೆ ದೂರದೂರುಗಳಿಂದ ಬಂದಿದ್ದ ಜನತೆ ಬಂದ ದಾರಿಗೆ ಸುಂಕ ವಿಲ್ಲ (3ನೇ ಪುಟಕ್ಕೆ)

## ಜಿ.ಪಂ., ತಾ.ಪಂ. ಕ್ಷೇತ್ರ ಪುನರ್ವಿಡಂಗಣೆಗೆ ಅಧಿಸೂಚನೆ

ಬೆಂಗಳೂರು, ಮಾ. 1 – ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿಗಳ ಕ್ಷೇತ್ರ ಪುನರ್ವಿಂಗಡಣೆಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ.

ರಾಜ್ಯ ಸರ್ಕಾರವು ಪಂಚಾಯತ್ ರಾಜ್ ಹಾಗೂ ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಕ್ಷೇತ್ರ ಪುನರ್‌ವಿಂಗಡಣೆ ಅಧಿಕಾರವನ್ನು ಚುನಾವಣಾ ಆಯೋಗದಿಂದ ಪಡೆದಿದೆ. ಇದನ್ನು ಪ್ರಶ್ನಿಸಿ ಆಯೋಗ ಹೈಕೋರ್ಟ್ ಮೊರೆ ಹೋಗಿದೆ. ವಿಚಾರಣೆಯನ್ನು ನ್ಯಾಯಾಲಯ ಗುರುವಾರಕ್ಕೆ ಮುಂದೂಡಿದೆ. ಚುನಾವಣೆಗಳು ವಿಳಂಬವಾದ ಕಾರಣಕ್ಕಾಗಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ 5 ಲಕ್ಷ ರೂ.ಗಳ ದಂಡ ವಿಧಿಸಿತ್ತು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಕೆ. ಮಂಜುನಾಥ ಬಿನ್ ದಿ. ಕೆ. ನಾರಪ್ಪ, ಕೆ. ನಂಜಪ್ಪ ಬಿನ್ ದಿ. ಕೆ. ನಾರಪ್ಪ ಮತ್ತು ಶ್ರೀಮತಿ ಶಶಿಕಲ ಬಿನ್ ದಿ. ಕೆ. ನಾರಪ್ಪ,** # 122/6 ಮತ್ತು 7, ಕಡ್ಲೆಬಾಳು ನಂಜಪ್ಪನ ಗಲ್ಲಿ, ಕಾಳಿಕಾದೇವಿ ದೇವಸ್ಥಾನದ ಹತ್ತಿರ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ,

ಕೆ. ಶಿವಕುಮಾರ್ ಬಿನ್ ಪಟೇಲ್ ನಾರಪ್ಪ ಅವರು ದಿನಾಂಕ : 25.02.2023ರಂದು ಜನತಾವಾಣಿ ಪತ್ರಿಕಾ ಹೇಳಿಕೆಯೊಂದನ್ನು ಕೊಟ್ಟು, ದಾವಣಗೆರೆ ಗ್ರಾಮ ಕಸಬಾ ಹೋಬಳಿಯ ರಿ.ಸ.ನಂ. 124/2ರಲ್ಲಿ ಅವರ ಮಾಲೀಕತ್ವ ಇದೆ ಎಂದು ಹೇಳಿಕೊಂಡಿದ್ದಾರೆ. ಇದು ಸಾರ್ವಜನಿಕರಿಗೆ ಅವರು ಕೊಟ್ಟಿರುವ ತಪ್ಪು ಮಾಹಿತಿಯಾಗಿರುತ್ತದೆ. ಈ ಹೇಳಿಕೆ ಆಧಾರದ ಮೇಲೆ ಶಿವಕುಮಾರ್ ಕೆ. ಬಿನ್ ಪಟೇಲ್ ನಾರಪ್ಪ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿಸುವುದೆಂದು ಸಾರ್ವಜನಿಕರಿಗೆ ತಿಳಿಸಲಾಗುವುದು.

ಆದರೆ **ದಾವಣಗೆರೆ ಗ್ರಾಮದ ರಿ.ಸ.ನಂಬರ್ 124/2ರ ಮೂಲ ಮಾಲೀಕರು ಕೆ. ಮಂಜುನಾಥ ಬಿನ್ ದಿ. ಕೆ. ನಾರಪ್ಪ (ಕಡ್ಲೆಬಾಳ್) ಮತ್ತು ಕೆ. ನಂಜಪ್ಪ ದಿ. ನಾರಪ್ಪ** ಇವರಾಗಿದ್ದಾರೆ. ಇವರ ತಂದೆಯ ಮರಣದ ನಂತರ ಪೌತಿ ಖಾತೆ ಇವರಿಗೆ ಆಗಿರುತ್ತದೆ. ಈ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಇವರ ಹೆಸರಿನಲ್ಲಿರುತ್ತವೆ ಮತ್ತು ಇವರೇ ಸ್ವಾಧೀನಾನುಭವದಲ್ಲಿರುತ್ತಾರೆ.

ಕೆ. ಶಿವಕುಮಾರ ಬಿನ್ ನಾರಪ್ಪ ಇವರು ದಿನಾಂಕ 12.12.1988ರಂದು ದಾವಣಗೆರೆ ಉಪ ನೋಂದಣಿ ಕಛೇರಿಯಲ್ಲಿ ಇವರು ಅವಿಭಕ್ತ ಕುಟುಂಬದಲ್ಲಿ ಯಾವುದೇ ರೀತಿಯಲ್ಲಿ ಹಕ್ಕು ಇರುವುದಿಲ್ಲವೆಂದು ಹಕ್ಕು ಖುಲಾಸೆ ಪತ್ರವನ್ನು ಬರೆದು ನೋಂದಣಿ ಮಾಡಿಸಿರುತ್ತಾರೆ. ಈ ಹಕ್ಕು ಖುಲಾಸೆ ಪತ್ರವು **ಒಂದನೇ ಪುಸ್ತಕದ 1859ನೇ ಪುಟ 233-235ರಲ್ಲಿ ನೋಂದಣಿಯಾಗಿದ್ದು, ಇದರ ಸಂಖ್ಯೆ ರಿ.ಸಂ.ನಂ. 4383/88-89** ಆಗಿರುತ್ತದೆ. ಈ ಪತ್ರದಲ್ಲಿ ಕೆ. ಶಿವಕುಮಾರ ಅವರು ಅವಿಭಕ್ತ ಕುಟುಂಬದಿಂದ ಬರುವ ಸ್ವತ್ತನ್ನು ಪಡೆದುಕೊಂಡು ಹಕ್ಕು ಖುಲಾಸೆಯಾಗಿರುತ್ತದೆ. **ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ಒಂದು ಸಾರಿ ಹಕ್ಕು ಖುಲಾಸೆ ಪತ್ರವನ್ನು ಒಬ್ಬ ವ್ಯಕ್ತಿ ಬರೆದು ನೋಂದಣಿ ಮಾಡಿಸಿಕೊಟ್ಟ ನಂತರ, ಆ ವ್ಯಕ್ತಿಗಾಗಲೀ ಅಥವಾ ಅವರ ವಾರಸುದಾರರಿಗಾಗಲಿ ಸದರಿ ಅವಿಭಕ್ತ ಕುಟುಂಬದ ಆಸ್ತಿ ದಾವಣಗೆರೆ ಗ್ರಾಮದ ರಿ.ಸ.ನಂ. 124/2ರಲ್ಲಿ ಯಾವುದು ಹಕ್ಕು ಅಥವಾ ಅಧಿಕಾರಿ ಇರುವುದಿಲ್ಲ.**

**ಷೆಡ್ಯೂಲ್ : ಕಸಬಾ ಹೋಬಳಿ, ಗ್ರಾಮ ದಾವಣಗೆರೆ ರಿ.ಸ.ನಂ. 124/2 ಅಳತೆ : 3-00 ಎಕರೆ ಆಗಿರುತ್ತದೆ. ಇದಕ್ಕೆ ಚಕ್ಕುಬಂಧಿ : ಪೂರ್ವಕ್ಕೆ-ರಿಂಗ್ ರಸ್ತೆ, ಪಶ್ಚಿಮಕ್ಕೆ - ರೈಲ್ವೆ ಹಳಿ, ಉತ್ತರಕ್ಕೆ ರಿ.ಸ.ನಂ. 125ರ ಆಸ್ತಿ, ದಕ್ಷಿಣಕ್ಕೆ : ಸ.ನಂ. 121ರ ಆಸ್ತಿ.**

Sd/- E.H. Basavaraj, BA., MSW, DPM, LLB., (LLM)
Advocate, Roll No. 75/94


# ಕೊನೆಭಾಗಕ್ಕೆ ತಲುಪದ ನೀರು

**ಭೇಟಿ ನೀಡಿ ಪರಿಸ್ಥಿತಿ ವೀಕ್ಷಿಸಿದ ಪವಿತ್ರ ರಾಮಯ್ಯ**

**ನೀರಾವರಿ ಕಚೇರಿಯಲ್ಲಿ ಇಂಜಿನಿಯರ್‌ಗಳ ವಿರುದ್ಧ ರೈತರ ಆಕ್ರೋಶ**

ಮಲೇಬೆನ್ನೂರು, ಮಾ. 1 - ಭದ್ರಾ ಜಲಾಶಯ ತುಂಬಿದ್ದರೂ ಅಚ್ಚುಕಟ್ಟಿನ ಕೊನೆಭಾಗದ ಭತ್ತದ ಗದ್ದೆಗಳಿಗೆ ನಿಗದಿತ ಪ್ರಮಾಣದಲ್ಲಿ ನೀರು ಹರಿದಬರುತ್ತಿಲ್ಲ, ನೀರಿನ ವಿತರಣೆ, ನಾಲೆ ನೀರಿನ ನಿರ್ವಹಣೆ ಸರಿ ಇಲ್ಲ ಎಂದು ಎಂಜಿನಿಯರುಗಳನ್ನು ರೈತರು ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರಾ ರಾಮಯ್ಯ ಅವರ ಸಮ್ಮುಖದಲ್ಲೇ ಹಿಗ್ಗಾಮಗ್ಗಾ ತರಾಟೆಗೆ ತೆಗೆದುಕೊಂಡ ಘಟನೆ ಪಟ್ಟಣದ ಭದ್ರಾ ನಾಲಾ ನಂ- 3 ವಿಭಾಗದ ಇಂಜಿನಿಯರ್ ಕಛೇರಿಯಲ್ಲಿ ಬುಧವಾರ ನಡೆಯಿತು.

ಕಛೇರಿಯಲ್ಲಿ ಸಾಕಷ್ಟು ವಾದ ವಿವಾದ, (3ನೇ ಪುಟಕ್ಕೆ)

# 1.49 ಲಕ್ಷ ಕೋಟಿ ಜಿ.ಎಸ್.ಟಿ. ಸಂಗ್ರಹ

ನವದೆಹಲಿ, ಮಾ. 1 – ಕಳೆದ ಫೆಬ್ರವರಿಯಲ್ಲಿ ಜಿ.ಎಸ್.ಟಿ. ಸಂಗ್ರಹ 1.49 ಲಕ್ಷ ಕೋಟಿ ರೂ.ಗಳಿಗೆ ತಲು ಪಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.12ರಷ್ಟು ಹೆಚ್ಚಾಗಿದೆ. ಆದರೆ, ಜನವರಿಯಲ್ಲಿ 1.58 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು. ಇದು 2017ರ ನಂತರ ಅತಿ ಹೆಚ್ಚಿನ ಜಿ.ಎಸ್.ಟಿ. ಸಂಗ್ರಹವಾಗಿದೆ. ಫೆಬ್ರವರಿಯಲ್ಲಿ 28 ದಿನಗಳಿ ರುವ ಕಾರಣ, ಸಾಮಾನ್ಯವಾಗಿ ಜಿ.ಎಸ್.ಟಿ. ಸಂಗ್ರಹ ಕಡಿಮೆ ಇರುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.


## ಮೂಲ ಕ್ರಯಪತ್ರ ಕಳೆದಿದೆ

ನಾನು ಟಿ.ಬಿ. ಸೋಮನಾಥ ಬಿನ್. ತೆಲಗಿ ಬಸವರಾಜಪ್ಪ # 1653/40, 4ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ–577004 ವಾಸಿಯಾಗಿದ್ದು ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಘನ ಜಿಲ್ಲಾ ನ್ಯಾಯಾಲಯದ ಆದೇಶದ ಮೇರೆಗೆ ರಾಜಿ ಡಿಕ್ರಿ–ನಂ.: Ex 72/2022 ಮೂಲಕ ಪಿತ್ರಾರ್ಜಿತ ಆಸ್ತಿಯಾದ ಮನೆ ನಂ.: 2154/1–2 ಅಳತೆ 44x60 ಅಡಿ, ರಾಧಸ್ವಾಮಿ ನಿಲಯ, 4ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ ನನ್ನ ಹೆಸರಿಗೆ ಬಂದಿದ್ದು, ಸದರಿ ಆಸ್ತಿಯನ್ನು ಸಬ್‌ರಿಜಿಸ್ಟರ್, ದಾವಣಗೆರೆ ಇವರಲ್ಲಿ ದಿನಾಂಕ : 22–09–2022 ರಂದು 12004 ನಂಬರಾಗಿ ರಿಜಿಸ್ಟರ್ ಆಗಿರುತ್ತದೆ. ಸದರಿ ಸೊತ್ತಿಗೆ ನಾನೇ ಮಾಲೀಕನು, ಹಕ್ಕುದಾರನು ಹಾಗೂ ಸ್ವಾಧೀನದಾರನೂ ಆಗಿರುತ್ತೇನೆ. ದಿನಾಂಕ : 21–02–2023ರ ಬೆಳಗ್ಗೆ ಅಂದಾಜು 11.30ರ ಸುಮಾರು ಆಂಜನೇಯ ಬಡಾವಣೆಯಿಂದ ಬರುವಾಗ ನನ್ನ ಮೇಲ್ಕಾಣಿಸಿದ ಮನೆಯ ಮೂಲ ದಾಖಲೆಗಳಾದ.

1) ದಾವಣಗೆರೆ ಸಬ್‌ರಿಜಿಸ್ಟರ್ ಮೂಲ ಕ್ರಯ ಪತ್ರ ನಂ. 915/98,99 ದಿ: 06–05–98 ಡೋರ್ ನಂ. : 2154/1 ಅಳತೆ 22x60 ಅಡಿ ಟಿ. ಬಸವರಾಜಪ್ಪ ಇವರ ಹೆಸರಿನಲ್ಲಿದ್ದು ಹಾಗೂ 2) ದಾವಣಗೆರೆ ಸಬ್‌ರಿಜಿಸ್ಟರ್ ಮೂಲ ಕ್ರಯ ಪತ್ರ ನಂ. 916/98,99 ದಿ : 06–05–98 ಡೋರ್ ನಂ. 2154/1 ಅಳತೆ 22x60 ಅಡಿ ಶ್ರೀಮತಿ ಟಿ. ಸುವರ್ಣಮ್ಮ ಕೋಂ. ಬಸವರಾಜಪ್ಪ ತೆಲಗಿ ಇವರ ಹೆಸರಿನಲ್ಲಿದ್ದ ಮತ್ತು ಈ ಸೊತ್ತಿಗೆ ಸಂಬಂಧಪಟ್ಟ ದಾವಣಗೆರೆ ನಗರಸಭೆ ಮಂಜೂರು ಮಾಡಿದ ಕಟ್ಟಡ ಮಂಜೂರಾತಿ ಪತ್ರ ಎಂಡಾರ್ಸ್‌ಮೆಂಟ್ ಮತ್ತು ಕಟ್ಟಡ ನಕಾಶೆ, ಇತ್ಯಾದಿ ಪತ್ರಗಳನ್ನೊಳಗೊಂಡ ಪೈಲು ಕಳೆದು ಹೋಗಿರುತ್ತದೆ.

ಸದರಿ ಪತ್ರಗಳನ್ನೊಳಗೊಂಡ ಪೈಲನ್ನು ಎಷ್ಟು ಹುಡುಕಿದರೂ, ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗೆ ನಾನು ಕಳೆದುಕೊಂಡಿರುವ ಸದರಿ ಮೂಲ ಪತ್ರಗಳನ್ನಾಗಲಿ ಅಥವಾ ಅವುಗಳ ದೃಢೀಕರಸಿದ ನಕಲನ್ನಾಗಲೀ ಯಾವುದೇ ಬ್ಯಾಂಕಿನಲ್ಲಾಗಲೀ ಅಥವಾ ಖಾಸಗಿ ವ್ಯಕ್ತಿಯಲ್ಲಾಗಲೀ ಅಡಮಾನವಾಗಿ ಇಟ್ಟಿರುವುದಿಲ್ಲ. ಸದರಿ ಪತ್ರಗಳ ಮೇಲೆ ಯಾವುದೇ ರೀತಿಯಿಂದಲೂ ಸಾಲ ವಗ್ಗೈರೆ ಮಾಡಿರುವುದಿಲ್ಲ ಮತ್ತು ಯಾರಿಗೂ ಕ್ರಯ, ಪರಭಾರೆ ಮಾಡಿರುವುದಿಲ್ಲ. ಸದರಿ ಮೂಲ ಪತ್ರಗಳನ್ನು ಯಾವುದೇ ಕೋರ್ಟ್ ಕಛೇರಿ ಇತ್ಯಾದಿಗಳಲ್ಲಿಯೂ ದಾಖಲು ಮಾಡಿರುವುದಿಲ್ಲ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.

ಮೇಲ್ಕಂಡಂತೆ ರಿಜಿಸ್ಟರ್ ಆಗಿರುವ ಮೂಲ ಪತ್ರಗಳು ಕಳೆದಿರುವುದು ನಿಜವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಒಂದು ವೇಳೆ ಮೇಲ್ಕಂಡ ಮೂಲ ದಾಖಲೆಗಳು ದೊರೆತಲ್ಲಿ ಅವುಗಳನ್ನು ದುರುಪಯೋಗ ಪಡಿಸಿಕೊಳ್ಳದೇ ಸಂಬಂಧಪಟ್ಟ ಇಲಾಖೆಗೆ ವಾಪಾಸ್ಸು ನೀಡಲು ಬದ್ಧನಾಗಿರುತ್ತೇನೆ. ನಾನು ಈ ಬಗ್ಗೆ ದಿನಾಂಕ : 21–02–2023ರಂದು ಆನ್‌ಲೈನ್ ಮುಖಾಂತರ ನಂ. : 0479252/2023, ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ ಇವರಿಗೆ ದೂರು ಸಲ್ಲಿಸಿದ್ದೇನೆ.

ಸ್ಥಳ : ದಾವಣಗೆರೆ
ದಿನಾಂಕ : 01–03–2023

ಸಹಿ/– ಟಿ.ಬಿ. ಸೋಮನಾಥ್
ಮೊ : 9482201068


# ಅಡುಗೆ ಅನಿಲದ ಬೆಲೆ 50 ರೂ. ಏರಿಕೆ

**ವೈಮಾನಿಕ ಇಂಧನದ ಬೆಲೆ ಇಳಿಕೆ, ಪೆಟ್ರೋಲ್-ಡೀಸೆಲ್ ಯಥಾಸ್ಥಿತಿ**

ನವದೆಹಲಿ, ಮಾ. 1 – ಅಡುಗೆ ಅನಿಲದ ಬೆಲೆಯನ್ನು ಬುಧವಾರದಂದು ಸಿಲಿಂಡರ್‌ಗೆ 50 ರೂ. ಹೆಚ್ಚಿಸಲಾಗಿದೆ. ಎಂಟು ತಿಂಗಳ ನಂತರ ಮೊದಲ ಬಾರಿಗೆ ಅಡುಗೆ ಅನಿಲದ ಬೆಲೆ ಹೆಚ್ಚಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐ.ಒ.ಸಿ., ಬಿ.ಪಿ.ಸಿ.ಎಲ್. ಹಾಗೂ ಹೆಚ್.ಪಿ.ಸಿ.ಎಲ್.ಗಳು ಬೆಲೆ ಏರಿಕೆ ಮಾಡಿವೆ. ಉಜ್ವಲ ಯೋಜನೆಯಲ್ಲಿ ಸಿಲಿಂಡರ್ ಪಡೆದಿ ರುವ 9.58 ಕೋಟಿ ಬಡವರಿಗೆ ಕೇಂದ್ರ ಸರ್ಕಾರ ಪ್ರತಿ ಸಿಲಿಂಡರ್‌ಗೆ 200 ರೂ.ಗಳ ಸಬ್ಸಿಡಿ ನೀಡುತ್ತಿದೆ.

ಈ ಹಿಂದೆ ಜುಲೈ 4, 2022ರಂದು ಅನಿಲ ಬೆಲೆ ಪರಿಷ್ಕರಿಸಲಾಗಿತ್ತು. ಈಗ ಈಶಾನ್ಯದ ಮೂರು ರಾಜ್ಯಗಳ ಚುನಾವಣೆಗಳು (3ನೇ ಪುಟಕ್ಕೆ)


## ನಾಗರತ್ನಮ್ಮ ನಿಧನ



ದಾವಣಗೆರೆಯ ಶಿವಶಾಂತಿ ನಿವಾಸ, ನಂ. 3595, 7ನೇ ಮೇನ್,
ಲಕ್ಷ್ಮಿ ವೇಂಕಟೇಶ್ವರ ದೇವಸ್ಥಾನ ಎದರು, ಎಂಸಿಸಿ 'ಬಿ' ಬ್ಲಾಕ್, ನಿವಾಸಿ
ದಿ. ಡಾ. ಆರ್. ಮಹದೇವಪ್ಪ ಅವರ ಧರ್ಮಪತ್ನಿ

**ಶ್ರೀಮತಿ ನಾಗರತ್ನಮ್ಮ**

ಇವರು ದಿನಾಂಕ 1.03.2023ರ ಬುಧವಾರ ಬೆಳಿಗ್ಗೆ 11.20 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.03.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ :
ಶ್ರೀಮತಿ ಶ್ರೀ ನಿರಂಜನ ಎಂ. ಮತ್ತು ಶ್ರೀಮತಿ ಶ್ರಿ ಸದಾನಂದ ಆರ್.ಎಂ.
ಮೊ : 98803 33050


# ಹೂಕುಂಡ 'ಕದ್ದವನ' ಬಂಧನ, ಅಧಿಕಾರಿ ವಜಾ

ಗುರುಗ್ರಾಮ್, ಮಾ. 1 – ಇಲ್ಲಿ ನಡೆಯಲಿರುವ ಜಿ20 ಸಮಾರಂಭದ ಹಿನ್ನೆಲೆಯಲ್ಲಿ ಅಲಂಕಾರಕ್ಕೆಂದು ಇರಿಸಲಾಗಿದ್ದ ಹೂಕುಂಡಗಳನ್ನು 'ಕಳ್ಳತನ' ಮಾಡಿದ 50 ವರ್ಷದ ಆಸ್ತಿ ವ್ಯಾಪಾರಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವ್ಯಕ್ತಿಯಿಂದ ಕಳ್ಳತನ ಮಾಡಲಾಗಿದ್ದ 10 ಹೂಕುಂಡಗಳು ಹಾಗೂ 'ಅಪರಾಧ'ಕ್ಕೆ ಬಳಸಲಾಗಿದ್ದ ಎಸ್.ಯು.ವಿ. ವಾಹನವೊಂದನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಅವರು ಗುರುಗ್ರಾಮ ಮಹಾನಗರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಯೊಬ್ಬರ ಹೆಸರು ಹೇಳಿದ್ದಾರೆ. ಅಧಿಕಾರಿಯನ್ನು ವಜಾಗೊಳಿಸಲಾಗಿದೆ.

ಅಲಂಕಾರಕ್ಕೆಂದು ಇರಿಸಲಾಗಿದ್ದ ಹೂಕುಂಡಗಳನ್ನು ಇಬ್ಬರು ವ್ಯಕ್ತಿಗಳು ಎಸ್.ಯು.ವಿ.ಯಲ್ಲಿ ಹಾಕಿಕೊಂಡು ಹೋಗುತ್ತಿರುವ ದೃಶ್ಯ ವೈರಲ್ ಆಗಿತ್ತು. ನಂತರ ಗುರುಗ್ರಾಮ ಪೊಲೀಸರು ಈ ಬಗ್ಗೆ ಎಫ್.ಐ.ಆರ್. ದಾಖಲಿಸಿದ್ದರು.

ಬಂಧಿತ ವ್ಯಕ್ತಿಯನ್ನು ಗಾಂಧಿ ನಗರ ಪ್ರದೇಶದ ನಿವಾಸಿ ಮನಮೋಹನ್ ಎಂದು ಗುರುತಿಸಲಾಗಿದೆ. ಹೂಕುಂಡಗಳನ್ನು ತೆಗೆದುಕೊಂಡು ಹೋಗಲು ಪ್ರಾಧಿಕಾರದ ಅಧಿಕಾರಿಯೊಬ್ಬರನ್ನು ಕರೆ ತಂದಿದ್ದಾಗಿ ವಿಚಾರಣೆ ವೇಳೆ (2ನೇ ಪುಟಕ್ಕೆ)


## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ತುಳಜಾಭವಾನಿ ಪ್ರಸನ್ನ ॥ ॥ ಶ್ರೀ ಕರಿಬಸವೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ ಕೆ.ಟಿ.ಜೆ. ನಗರ ವಾಸಿ

**ಶ್ರೀಮತಿ ಶಾರದಾಬಾಯಿ ನರಸೋಜಿರಾವ್ ಸುರ್ವೆ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 19-02-2023ನೇ ಭಾನುವಾರ ರಾತ್ರಿ 9-30ಕ್ಕೆ ನನ್ನ ಮಗನಾದ



**ಶ್ರೀ ಎನ್. ಕೃಷ್ಣಮೂರ್ತಿ**

ಮಾಲೀಕರು, ವಿಜಯ ಲಾರಿ ಟ್ರಾನ್ಸ್‌ಪೋರ್ಟ್, ದಾವಣಗೆರೆ.

ಇವರು ವೈಕುಂಠವಾಸಿಯಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

'ವೈಕುಂಠ ಸಮಾರಾಧನೆ'ಯನ್ನು


ದಿನಾಂಕ 02-03-2023ನೇ ಗುರುವಾರ ಮಧ್ಯಾಹ್ನ 12–30 ಕ್ಕೆ
ದಾವಣಗೆರೆ ಕೆಟಿಜೆ ನಗರ 16ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ

ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

*ಇಂತಿ ದುಃಖತಪ್ತರು :*

ಪತ್ನಿ : ಶ್ರೀಮತಿ ಪದ್ಮಾವತಿ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಸುರ್ವೆ ಸಹೋದರರು ಹಾಗೂ ಬಂಧು - ಮಿತ್ರರು.





# ಭಕ್ತರು ಸಹಕಾರ ನೀಡಿದರೆ ಸಾಣೇಹಳ್ಳಿಯಲ್ಲಿ 'ಶರಣ ಲೋಕ' ನಿರ್ಮಾಣ

ಸಾಣೇಹಳ್ಳಿ, ಮಾ.1- ಯುವ ಕರು ಪರಿವರ್ತನೆಯಾದರೆ ಮಾತ್ರ ಸಮಾಜ ಸುಧಾರಿಸಲು ಸಾಧ್ಯ ಎಂಬ ವಿಶ್ವಾಸವನ್ನು ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವ್ಯಕ್ತಪಡಿಸಿದರು.




ಇಲ್ಲಿನ ಎಸ್. ಎಸ್. ರಂಗಮಂದಿ ರದಲ್ಲಿ ಆಯೋಜಿಸಲಾಗಿದ್ದ 'ಹಳೆ ಬೇರು ಹೊಸ ಚಿಗುರು', ದವಸ ಸಮರ್ಪಣೆ ಮತ್ತು ಹಿರಿಯ ಚೇತನಗಳಿಗೆ ಅಭಿನಂದನಾ ಕಾರ್ಯಕ್ರ ಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹಿರಿಯ ಚೇತನಗಳನ್ನು ಗೌರವಿಸದೇ, ಮಠ, ಮನೆ, ಸಮಾಜಗಳನ್ನು ಉದಾಸೀನ ಮಾಡುವ ಇಂದಿನ ಯುವಪೀಳಿಗೆಗೆ ಈ ಕಾರ್ಯಕ್ರಮ ಮಾರ್ಗದರ್ಶಿಯಾಗಿದೆ ಎಂದು ಹೇಳಿದರು.

ನಾವು ಸ್ವಾಮಿಗಳಾದ ಆರಂಭದಲ್ಲಿ ಹಳ್ಳಿಗಳಿಗೆ ದವಸ ಸಂಗ್ರಹಕ್ಕೆ ಹೋಗುತ್ತಿದ್ದೆವು. ದವಸ ಸಂಗ್ರಹ ಒಂದು ಸಂಕೇತವಾಗಿತ್ತು. ಇಂದು ರಾಗಿ, ಜೋಳ, ನವಣೆ ಮೊದಲಾದ ದವಸಗಳನ್ನು ಬೆಳೆಯುವ ಪ್ರಮಾಣ ತುಂಬ ಕಡಿಮೆಯಾಗಿದೆ. ಅಡಿಕೆ, ತೆಂಗು, ಬಾಳೆ ಮೊದಲಾದ ವಾಣಿಜ್ಯ ಬೆಳೆಗಳನ್ನು ಹೆಚ್ಚು ಹೆಚ್ಚು ಬೆಳೆಯುತ್ತಿದ್ದಾರೆ. ಆದರೂ ಮಠಕ್ಕೆ ನೀಡುವ ಪ್ರವೃತ್ತಿ ನಿಂತಿಲ್ಲ. ಇದರ ಜೊತೆಗೆ ಬೆಳೆದ ಅಡಿಕೆಯನ್ನು ಕೊಡುವ ಪ್ರವೃತ್ತಿ ಬೆಳೆಸಿಕೊಂಡರೆ ಮಠ ಆರ್ಥಿಕವಾಗಿ ಇನ್ನೂ ಸದೃಢವಾಗಿ ಬೆಳೆಯಲು ಸಾಧ್ಯವಾಗುವುದು. ಆಗ ಇಲ್ಲಿ ಓದುತ್ತಿರುವ ಎಲ್ಲ ಮಕ್ಕಳಿಗೆ ಉಚಿತ ಪ್ರಸಾದ, ಶಿಕ್ಷಣ ನೀಡಬಹುದು. ಶ್ರೀಮಠದ ಆವರಣದಲ್ಲಿ ಬಸವಾದಿ ಶಿವಶರಣರ ಪ್ರತಿಕೃತಿಗಳು ಮತ್ತು ಅವರಿಗೆ ಸಂಬಂಧಿಸಿದ ಪರಿಕರಗಳ ಮೂಲಕ ಜನರಿಗೆ ವಿಶೇಷವಾಗಿ ಮಕ್ಕಳಿಗೆ ಪರಿಚಯಿಸುವ 'ಶರಣ ಲೋಕ'ವನ್ನು ನಿರ್ಮಿಸುವ ಉದ್ದೇಶವಿದೆ. ಇದಕ್ಕೆ 4-5 ಕೋಟಿ ರೂ.ಗಳ ಅವಶ್ಯಕತೆಯಿದೆ. ಭಕ್ತರು ಉದಾರವಾಗಿ ಆರ್ಥಿಕ ನೆರವು ನೀಡಿದರೆ ಆ ಕಾರ್ಯವನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಯಾರು ಏನೇ ಟೀಕೆ, ಆರೋಪ ಮಾಡಿದರೂ ನಾವು ನಮ್ಮ ಕೆಲಸವನ್ನು ಮಾಡಿಕೊಂಡು ಹೋಗುವೆವು. ನಮ್ಮಲ್ಲಿ ಏನು ದೋಷವಿದೆಯೋ ತಿಳಿಯದು. ದೋಷಗಳಿದ್ದರೆ ಯಾರು ಬೇಕಾದರೂ ಬಂದು ಹೇಳಬಹುದು. ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ಗುರು-ಶಿಷ್ಯರ ಪರಸ್ಪರ ಸಹಕಾರದಿಂದಾಗಿ ಶ್ರೀಮಠದ ಪ್ರಗತಿ, ಬೆಳವಣಿಗೆ ಸಾಧ್ಯವಾಗಿದೆ. ನಮ್ಮ ಎಲ್ಲ ಯೋಜನೆಗಳು, ಯೋಚನೆಗಳನ್ನು ಸಾಕಾರಗೊಳಿಸುವವರು ಸಮಾಜಬಾಂಧವರು. ಇದು ನಮ್ಮ ಸಾಧನೆಯಲ್ಲ; ಭಕ್ತರ ಮತ್ತು ಹಿರಿಯ ಗುರುಗಳ ಕೃಪಾಶೀರ್ವಾದವೇ ಕಾರಣ.

ಆರೋಗ್ಯದ ಸ್ಥಿತಿ ಉತ್ತಮವಾಗಿಲ್ಲದಿದ್ದರೂ ಚಂದ್ರಣ್ಣ, ಚಂದ್ರಶೇಖರಯ್ಯ, ಸಿದ್ಧಪ್ಪನವರಂಥ ಹಲವರು ಹಗಲು ರಾತ್ರಿ ಶ್ರಮಿಸುತ್ತಿರುವುದರ ಫಲವಾಗಿ ನಮ್ಮ ಮಠ ಅಭಿವೃದ್ಧಿಯಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಾಟಿ ಸಿದ್ಧರಾಮಪ್ಪ ಸೌತನಹಳ್ಳಿ, ದೊಡ್ಡಮಲ್ಲಪ್ಪ, ಲಿಂಗಮೂರ್ತಿ, ಶಾರದ ಮುಂಡ್ರೆ, ಹಳೆ ಮನೆ ಪಾಪಣ್ಣ, ಹೊಗರೇಹಳ್ಳಿ, ಚಂದ್ರಪ್ಪ ಗೌಡ್ರು ಲಿಂಗದಹಳ್ಳಿ. ಶಾಂತವೀರಪ್ಪ ದೋರನಾಳು, ಈಶ್ವರಪ್ಪ ಸಪ್ಪನಹಳ್ಳಿ, ಪುಟ್ಟಮಲ್ಲಪ್ಪ ಚಂದ್ರಶೇಖರಪ್ಪ, ಗಂಗಾಧರಪ್ಪ, ದೇವೀರಮ್ಮ ಚಿಕ್ಕಾನವಂಗಲ, ಚನ್ನಬಸಪ್ಪ ಚಿಣ್ಣಾಪುರ, ಮಲ್ಲೇಶಪ್ಪ ನಾಗರಕಟ್ಟೆ, ಗುರುಯ್ಯ ಸಾಣೇಹಳ್ಳಿ, ಓಂಕಾರಪ್ಪ ಖಿಗ್ಗಿ, ಸಿದ್ಧಗಂಗಪ್ಪ ಆಸಂದಿ, ಕೊಟ್ಟೂರಯ್ಯ ಗಂಗನಹಳ್ಳಿ, ಸಿದ್ಧಜ್ಜ ಗುತ್ತಿದುರ್ಗ, ಮಹೇಶ್ವರಪ್ಪ ನಾಗೇನಹಳ್ಳಿ, ರುದ್ರಪ್ಪ ವಿಠಲಾಪುರ, ಈಶ್ವರಪ್ಪ ಚೆನ್ನಾಪುರ, ಗಂಗಾಧರಪ್ಪ ದುರ್ವಿಗೆರೆ, ಎಲ್. ಬಿ. ಮಹೇಶ್ವರಪ್ಪ ಕಂಗುವಳ್ಳಿ ಮೊದಲಾದ ಹಿರಿಯ ಚೇತನಗಳನ್ನು ಪಂಡಿತಾರಾಧ್ಯ ಶ್ರೀಗಳು ಶಾಲು, ಹಾರ ಹಾಕಿ, ಫಲಹಾರ, ಸ್ಮರಣಿಕೆಯನ್ನು ನೀಡಿ ಅಭಿನಂದಿಸಿದರು.

ಎಸ್. ಆರ್. ಚಂದ್ರಶೇಖರಯ್ಯ ಸ್ವಾಗತಿಸಿದರು. ಎ. ಸಿ. ಚಂದ್ರಣ್ಣ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಾಲಾ ಮಕ್ಕಳು ವಚನ ಗೀತೆಗಳನ್ನು ಹಾಡಿದರು, ಸುಗ್ಗಿ ಹಾಡಿಗೆ ಹೆಜ್ಜೆ ಹಾಕಿದರು. ಈ ಸಂದರ್ಭದಲ್ಲಿ ನಾಲ್ಕೂವರೆ ಲಕ್ಷ ಹಣ, 48 ಕ್ವಿಂಟಲ್ ರಾಗಿ ಮತ್ತು ಕಡಲೆ, ಅಕ್ಕಿ, ಮೆಣಸಿನಕಾಯಿಯನ್ನು ಶ್ರೀಮಠಕ್ಕೆ ಭಕ್ತರು ಸಮರ್ಪಿಸಿದರು.

ಬೆಳಗಿನ ಜಾವ, ಪ್ರಮೋದ್, ಚಂದ್ರಶೇಖರ್ ರಾಜ್, ಲೋಕೇಶ್ ಕುಮಾರ್, ಲಿಂಗರಾಜು ಎನ್ನುವ ವಟುಗಳಿಗೆ ಶ್ರೀಮಠದಲ್ಲಿ ಪೂಜ್ಯರು ಜಂಗಮ ದೀಕ್ಷೆ ನೀಡಿದರು.

> **'ನಮ್ಮಂಥ ಸ್ವಾಮಿಗಳನ್ನು ಬೇಕಾದಷ್ಟು ತರಬಹುದು, ಆದರೆ ಮಾಗನೂರು ಬಸಪ್ಪನವ ರಂಥ ಶಿಷ್ಯರನ್ನು ತರುವುದು ತುಂಬ ಕಷ್ಟ' ಎಂದು ಶಿವಕುಮಾರ ಶ್ರೀಗಳು ಹೇಳುತ್ತಿದ್ದರು. ಅವರ ಮಾತು ನಮ್ಮದೂ ಆಗಿದೆ. ಗುರುವಿಗಿಂತ ಶಿಷ್ಯರೇ ಶ್ರೇಷ್ಠರು. ಸ್ವಾಮಿಗಳು ತಪ್ಪು ಮಾಡಿದಾಗ ಶಿಷ್ಯರು, ಶಿಷ್ಯರು ತಪ್ಪು ಮಾಡಿದಾಗ ಸ್ವಾಮಿಗಳು ಬುದ್ಧಿವಾದ ಹೇಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.**
>
> **- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ**

# ಮಲೇಬೆನ್ನೂರಿನಲ್ಲಿ ಭಾವೈಕ್ಯತೆ ಗಂಧದ ಮೆರವಣಿಗೆ

ಮಲೇಬೆನ್ನೂರು, ಮಾ. 1 - ಭಾವಕ್ಯತೆಯ ಸಂಕೇತವಾಗಿರುವ ಇಲ್ಲಿನ ಪ್ರಸಿದ್ಧ ಹಜರತ್ ಸೈಯದ್ ಹಬಿಬುಲ್ಲಾ ಷಾಖಾದ್ರಿ ಅವರ ಉರುಸ್ ಅಂಗವಾಗಿ ಬುಧವಾರ ಸಂಜೆ ಗಂಧದ (ಸಂದಲ್) ಮೆರವಣಿಗೆ ಸಂಭ್ರಮದಿಂದ ಜರುಗಿತು.

ದರ್ಗಾದಿಂದಾ ಪ್ರಾರಂಭವಾದ ಮೆರವಣಿಗೆಯು ಪಟ್ಟಣದ ರಾಜಬೀದಿಗಳಲ್ಲಿ ಸಂಚರಿಸಿ ನಂದಿಗುಡಿ ರಸ್ತೆ ಮೂಲಕ ಪುನಃ ದರ್ಗಾಕ್ಕೆ ಬಂದು ಮುಕ್ತಾಯ ಗೊಂಡಿತು.

ಗಂಧದ ಮೆರವಣಿಗೆ ವೇಳೆ ಹಿಂದೂ-ಮುಸ್ಲಿಂ ಬಾಂಧವರು ಗಂಧಕ್ಕೆ ಪೂಜೆ ಸಲ್ಲಿಸುವ ಮೂಲಕ ಸಾಮಾರಸ್ಯ ಮೆರೆದರು. ಕುದುರೆ ಕುಣಿತ, ಫಕೀರ ಸ್ವಾಮಿಗಳ ಪವಾಡಗಳು ಮೆರವಣಿಗೆಯಲ್ಲಿ ಗಮನ ಸೆಳೆದವು. ಎ.ಎಸ್ಪಿ. ಕನ್ನಿಕಾ ಸಕ್ರಿವಾಲ್, ಸಿಪಿಐ ಗೌಡಪ್ಪಗೌಡ, ಪಿಎಸ್ಐ. ಪ್ರಭು ಕೆಳಗಿನ ಮನೆ ಅವರ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಉರುಸ್ ಕಮಿಟಿ ಅಧ್ಯಕ್ಷ ಎಂ.ಬಿ ಖುರ್ಬಾನ್ ಅಲಿ ಮತ್ತು ಪದಾಧಿಕಾರಿಗಳು ಮೆರವಣಿಗೆಯ ನೇತೃತ್ವ ವಹಿಸಿದ್ದರು.

**ಉರುಸ್** : ಗುರುವಾರ ಇಡೀ ದಿನ ದರ್ಗಾದಲ್ಲಿ ಉರುಸ್ ನಡೆಯಲಿದ್ದು ರಾತ್ರಿ 9 ಗಂಟೆಯಿಂದ ಪ್ರಸಿದ್ಧ ಖವ್ವಾಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



# ಕೋಟೆಮಲ್ಲೂರು ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ಹೊನ್ನಾಳಿ, ಮಾ.1- ತಾಲ್ಲೂಕಿನ ಕೋಟೆಮಲ್ಲೂರು ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು. ರಥೋತ್ಸವದಲ್ಲಿ ತಾಲ್ಲೂಕಿನ ಬೇಲಿಮಲ್ಲೂರು ಶ್ರೀ ಆಂಜನೇಯ ಸ್ವಾಮಿ, ಅರಕೆರೆ ಗ್ರಾಮದ ಶ್ರೀ ಹೊನ್ನತ್ತೆಮ್ಮದೇವಿ, ಕೋಟೆಮಲ್ಲೂರು ಗ್ರಾಮದ ಶ್ರೀ ದುರುಗಮ್ಮ ದೇವಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಬಾಳೆಲಿಂಗೇಶ್ವರ ಸ್ವಾಮಿಗಳ ಉತ್ಸವ ಮೂರ್ತಿಗಳು ಪಾಲ್ಗೊಂಡಿದ್ದವು. ರಾಣೇಬೆನ್ನೂರಿನ ಪುರುವಂತರು ನಡೆಸಿಕೊಟ್ಟ ವೀರಗಾಸೆ ಕುಣಿತ ಭಕ್ತರ ಕಣ್ಮನ ತಣಿಸಿತು.

ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳು ಸೇರಿದಂತೆ ನಾಡಿನ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವದಲ್ಲಿ ಪಾಲ್ಗೊಂಡರು. ಪಕ್ಕದ ಗ್ರಾಮವಾದ ಬೇಲಿಮಲ್ಲೂರು ಗ್ರಾಮದ ಅನೇಕ ಮುಖಂಡರು, ಹೊನ್ನಾಳಿ ಪಟ್ಟಣ ಸೇರಿದಂತೆ ತಾಲ್ಲೂಕಿನ ನಾನಾ ಗ್ರಾಮಗಳ ಜನತೆ, ಶ್ರೀ ವೀರಭದ್ರೇಶ್ವರಸ್ವಾಮಿ ಒಕ್ಕಲಿನ ನೂರಾರು ಕುಟುಂಬಸ್ಥರು ಆಗಮಿಸಿದ್ದರು.

## ಚಳ್ಳಕೆರೆ : ಇಲಿ ಜ್ವರ ಜಾಗೃತಿ ಅಭಿಯಾನ



ಚಳ್ಳಕೆರೆ, ಮಾ. 1-ಇಲ್ಲಿನ ಜಿಲ್ಲಾ ಸರ್ವೇಕ್ಷಣಾ ಘಟಕ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ಇಲಿ ಜ್ವರ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಜಯಣ್ಣ ನರ್ಸಿಂಗ್ ಕಾಲೇಜ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾಲೇಜು ಹುಡುಗರಿಂದ ಪ್ರಮುಖ ಬೀದಿಗಳಲ್ಲಿ ಇಲಿ ಜ್ವರದ ಬಗ್ಗೆ ಜಾಗೃತಿ ಮೂಡಿಸಿದರು. ಈ ಜಾಥಾದಲ್ಲಿ ತಿಪ್ಪೇಸ್ವಾಮಿ, ಬಿಪಿಎಂ ಪ್ರದೀಪ್, ಆರೋಗ್ಯ ನಿರೀಕ್ಷಣಾಧಿಕಾರಿ ಅಮೃತ್‌ರಾಜ್, ಜಯಣ್ಣ ನರ್ಸಿಂಗ್ ಕಾಲೇಜು ಉಪನ್ಯಾಸಕರಾದ ದಿವ್ಯ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅಪರಿಚಿತ ಯುವಕನ ಶವ ಪತ್ತೆ

ದಾವಣಗೆರೆ, ಮಾ.1- ನಗರದ ಬಾಪೂಜಿ ಆಸ್ಪತ್ರೆಯ ಒಪಿಡಿ ಬ್ಲಾಕ್ ಎದುರಿನ ರಸ್ತೆಯಲ್ಲಿ ಸುಮಾರು 35 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ. ಬಲಗೈನಲ್ಲಿ ಅಮ್ಮ ಎಂದೂ, ಎಡಗೈಯಲ್ಲಿ ಫರೀದಾ ಮತ್ತು ಚಿನ್ನು ಎಂದೂ, ಎದೆಯ ಎಡಭಾಗದಲ್ಲಿ ಫರೀದಾ ಎಂದು ಹಚ್ಚೆ ಗುರುತು ಇದೆ. ನೀಲಿ ತುಂಬು ತೋಳಿನ ಶರ್ಟ್, ನೀಲಿ ಪ್ಯಾಂಟ್, ಕಂದು ಬಣ್ಣದ ಅಂಡರ್‌ವೇರ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಬಡಾವಣೆ ಪೊಲೀಸ್ ಠಾಣೆ (ದೂರವಾಣಿ 08192-272012, 08192-259213) ಯನ್ನು ಸಂಪರ್ಕಿಸಬಹುದು.

# ಸಂಕಷ್ಟದಲ್ಲಿರುವ ಜನರ ಕೈ ಹಿಡಿಯುವುದು ಕಾಂಗ್ರೆಸ್ ಮಾತ್ರ

## ಭರಮಸಾಗರದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ

ಭರಮಸಾಗರ, ಮಾ.1 - ಕೇಂದ್ರ ಮತ್ತು ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ಸಂಪೂರ್ಣವಾಗಿ ಬರೀ ಸುಳ್ಳು ಹೇಳುವ ಮೂಲಕ ಜನರ ದಾರಿ ತಪ್ಪಿಸುತ್ತೀವೆ. ಆದರೆ, ಕಾಂಗ್ರೆಸ್ ಪಕ್ಷ ಮಾತ್ರ ಜನಪರವಾಗಿದ್ದು ಸಂಕಷ್ಟದಲ್ಲಿರುವ ಜನರ ಕೈ ಹಿಡಿಯುವ ಪಕ್ಷವಾಗಿದೆ ಎಂದು ಮಾಜಿ ಸಚಿವ, ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಹೇಳಿದರು.



ಬುಧವಾರ ಭರಮಸಾಗರದ ದುರ್ಗಾಂಬಿಕ ದೇವಸ್ಥಾನ ಆವರಣದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆದ ಕಾಂಗ್ರೆಸ್ ಪಕ್ಷದ ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನಭಾಗ್ಯ ಕಾರ್ಡ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷವು ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಜನರಿಗೆ ನೆರವಾಗುವ ಉದ್ದೇಶದಿಂದ ಗೃಹಜ್ಯೋತಿ ಯೋಜನೆ ಮೂಲಕ 200 ಯುನಿಟ್ ಉಚಿತ ವಿದ್ಯುತ್, ಗೃಹಲಕ್ಷ್ಮಿ ಯೋಜನೆ ಮೂಲಕ ಪ್ರತಿ ಕುಟುಂಬದ ಯಜಮಾನಿಗೆ ಮಾಸಿಕ ರೂ.2000, ಹಾಗೂ ಅನ್ನಭಾಗ್ಯ ಯೋಜನೆಯ ಮೂಲಕ ಪ್ರತಿ ವ್ಯಕ್ತಿಗೆ 10 ಕೆಜಿ ಅಕ್ಕಿ ನೀಡಲು ತೀರ್ಮಾನಿಸಿ ಮೂರು ಐತಿಹಾಸಿಕ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದೆ ಎಂದರು.

ಕಾಂಗ್ರೆಸ್ ಪಕ್ಷವು ಜಾತಿ ಭೇದವಿಲ್ಲದೇ ಅನ್ನಭಾಗ್ಯ ಕರುಣಿಸಿದ ಪಕ್ಷವಾಗಿದೆ. ಕಾಂಗ್ರೆಸ್ ವಿರುದ್ಧ ಇಲ್ಲ ಸಲ್ಲದ ಆರೋಪ ಹೊರಿಸುವ ಸುಳ್ಳುಗಳ ಸರಮಾಲೆಯನ್ನೇ ಹೊದಿಸಿಕೊಂಡು ಜನರ ಮನಸ್ಸಿನಲ್ಲಿ ವಿಷ ಬೀಜ ಬಿತ್ತುತ್ತ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಬಡ ಜನರಿಗೆ ಅನುಕೂಲಕರ ಯೋಜನೆ ಜಾರಿ ಮಾಡಿಲ್ಲ. ಇದೀಗ ಗ್ಯಾಸ್ ಸಿಲಿಂಡರ್ ಬೆಲೆ 1150 ರೂ., 1 ಕೆಜಿ ಅಕ್ಕಿಯ ಬೆಲೆ ರೂ.50 ಆಗಿದೆ. ಬೆಲೆ ಏರಿಕೆಗಳ ಮಧ್ಯೆ ಬಡ ಜನರು ಜೀವನ ಮಾಡುವುದು ಕಷ್ಟವಾಗಿದೆ ಎಂದು ಆರೋಪಿಸಿದರು.

ಕೆಪಿಸಿಸಿ ಸದಸ್ಯ, ಜಿ.ಪಂ ಮಾಜಿ ಉಪಾಧ್ಯಕ್ಷ ಎಚ್.ಎನ್.ತಿಪ್ಪೇಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸರ್ವ ಜನಾಂಗದವರು ಸಂತೃಪ್ತಿಯಿಂದ ಜೀವನ ನಡೆಸುತ್ತಿದ್ದರು. ಆದರೆ, ಈಗ ತುಂಬಾ ದುಬಾರಿ ಜೀವನ ನಡೆಸಬೇಕಾಗಿದೆ ಎಂದು ದೂರಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಎಮ್ಮೆಹಟ್ಟಿ ಕೃಷ್ಣಮೂರ್ತಿ ಮಾತನಾಡಿದರು. ಭರಮಸಾಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಅಳಗವಾಡಿ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದುರ್ಗೇಶ್ ಪೂಜಾರ್, ತಾಂಡಾ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಅನಿಲ್ ಕುಮಾರ್, ಜಿಪಂ ಮಾಜಿ ಸದಸ್ಯರಾದ ನರಸಿಂಹರಾಜ, ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಮುಬಾರಕ್, ಗ್ರಾಪಂ ಅಧ್ಯಕ್ಷೆ ಮಂಜುಳಾ ಸೇರಿದಂತೆ ಕಾಂಗ್ರೆಸ್ ಮುಖಂಡರು, ಮಹಿಳಾ ಕಾರ್ಯಕರ್ತರು ಉಪಸ್ಥಿತರಿದ್ದರು.

## ಹೂಕುಂಡ 'ಕದ್ದವನ' ಬಂಧನ, ಅಧಿಕಾರಿ ವಜಾ

**(1ನೇ ಪುಟದಿಂದ)** ಮನಮೋಹನ್ ತಿಳಿಸಿದ್ದು, ಅಧಿಕಾರಿಯನ್ನೂ ವಜಾಗೊಳಿಸಲಾಗಿದೆ. ವಜಾಗೊಂಡ ಅಧಿಕಾರಿಯನ್ನು ನವಾಬ್ ಸಿಂಗ್ ಎಂದು ಗುರುತಿಸಲಾಗಿದೆ. ಇವರು ನಗರ ಪರಿಸರ ವಿಭಾಗದ ವ್ಯವಸ್ಥಾಪಕರಾಗಿದ್ದರು. ಅವರನ್ನೂ ಸಹ ಶೀಘ್ರದಲ್ಲೇ ಬಂಧಿಸಲಾಗುವುದು. ಮುಂದೆ ವಿಚಾರಣೆಗೆ ಕರೆದಾಗ ಬರಬೇಕು ಎಂಬ ಷರತ್ತಿನ ಬಾಂಡ್‌ನೊಂದಿಗೆ ಮನಮೋಹನ್ ಬಿಡುಗಡೆ ಮಾಡಲಾಗಿದೆ ಎಂದು ಡಿ.ಸಿ.ಪಿ. (ಪೂರ್ವ) ವೀರೇಂದ್ರ ವಿಜ್ ತಿಳಿಸಿದ್ದಾರೆ. ವೈರಲ್ ಆದ ವಿಡಿಯೋದಲ್ಲಿದ್ದ ವಾಹನದ ನೋಂದಣಿ ಸಂಖ್ಯೆ ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಗಿದೆ. ಇದನ್ನು ಆರೋಪಿಯ ಪತ್ನಿ ಹೆಸರಿಗೆ ನೋಂದಣಿ ಮಾಡಲಾಗಿತ್ತು. ಮಾರ್ಚ್ 1ರಿಂದ 4ರ ನಡುವೆ ನಡೆಯಲಿರುವ ಜಿ20 ಸಭೆಗಳ ಹಿನ್ನೆಲೆಯಲ್ಲಿ ದೆಹಲಿ - ಗುರುಗ್ರಾಮ ಎಕ್ಸ್‌ಪ್ರೆಸ್ ವೇನಲ್ಲಿರುವ ಆಂಬಿಯನ್ಸ್ ಮಾಲ್ ಎದುರು ಹೂಕುಂಡಗಳನ್ನು ಇರಿಸಲಾಗಿತ್ತು.

## ತಾರೇಹಳ್ಳಿಯಲ್ಲಿಂದು ರಂಗನಾಥ ಸ್ವಾಮಿ ಓಕಳಿ ಉತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿಯ ಶ್ರೀ ರಂಗನಾಥ ಹಿರಿಯ ಧಾರ್ಮಿಕ ದತ್ತಿ ದೇವಸ್ಥಾನದ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಓಕಳಿ ಉತ್ಸವವು ಇಂದು ನಡೆಯಲಿವೆ.

# ಟಿಕ್‌ಟಾಕ್ ನಿಷೇಧಿಸಿದ ಯುರೋಪ್‌ಗೆ ಚೀನಾ ಬೋಧನೆ

## ಆದರೆ, ಚೀನಾದಲ್ಲೇ ಟಿಕ್‌ಟಾಕ್ ಮೇಲಿದೆ ನಿಷೇಧ

ಬೀಜಿಂಗ್, ಮಾ. 1 – ಟಿಕ್‌ಟಾಕ್ ಮೇಲೆ ನಿಷೇಧ ಹೇರುವುದರಿಂದ ಯುರೋಪ್‌ನಲ್ಲಿ ಔದ್ಯಮಿಕ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ ಎಂದು ಚೀನಾ ಹೇಳಿದೆ.

ಭಾರತ ಈ ಹಿಂದೆಯೇ ಟಿಕ್‌ಟಾಕ್ ಮೇಲೆ ನಿಷೇಧ ಹೇರಿತ್ತು. ಅಧಿಕೃತ ಉಪಕರಣ ಗಳಲ್ಲಿ ಟಿಕ್ ಟಾಕ್ ಬಳಸದಂತೆ ಯುರೋಪ್ ಸಂಸತ್ತು, ಯುರೋಪ್ ಆಯೋಗ ಹಾಗೂ ಯುರೋಪ್ ಮಂಡಳಿಗಳು ನಿಷೇಧ ಹೇರಿವೆ.

ಅಮೆರಿಕದ ಅಧಿಕಾರಿಗಳು, ಅಮೆರಿಕದ ಶಾಸನ ಸಭೆ ಹಾಗೂ ಅಲ್ಲಿನ ಅರ್ಧದಷ್ಟು ರಾಜ್ಯ ಶಾಸನಸಭೆಗಳು ಇದೇ ರೀತಿಯ ಕ್ರಮ ತೆಗೆದುಕೊಂಡಿವೆ. ಕೆನಡಾ ಸಹ ಸರ್ಕಾರಿ ಉಪಕರಣಗಳಲ್ಲಿ ಟಿಕ್‌ಟಾಕ್ ಬಳಸದಂತೆ ನಿಷೇಧಿಸಿದೆ.

ಟಿಕ್‌ಟಾಕ್ ಬಳಕೆದಾರರ ಖಾಸಗಿತನದ ಕುರಿತು ಪ್ರಶ್ನೆಗಳಿವೆ. ಇದರಲ್ಲಿನ ಮಾಹಿತಿ ಬಳಸಿ ಅಪಪ್ರಚಾರ ಮಾಡಲಾಗುತ್ತಿದೆ ಎಂಬ ದೂರುಗಳಿವೆ. ಆಸಕ್ತಿಕರ ಅಂಶವೆಂದರೆ ಸ್ವತಃ ಚೀನಾ ಟಿಕ್‌ಟಾಕ್ ಮೇಲೆ ನಿಷೇಧ ಹೇರಿದೆ. ಚೀನಾದಲ್ಲಿ ಟಿಕ್‌ಟಾಕ್‌ನ ಬೇರೆ ಆವೃತ್ತಿಯಾದ ಡೊಯಿನ್ ಬಳಸಲು ಅನುಮತಿ ಇದೆ. ಆದರೆ, ಎರಡರಲ್ಲೂ ಇರುವ ಅಂಶಗಳು ಬೇರೆ ಆಗಿವೆ.

ಯೂಟ್ಯೂಬ್, ಟ್ವಿಟ್ಟರ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮ್ ಸೇರಿದಂತೆ ಹಲವಾರು ವಿದೇಶಿ ಮೆಸೇಜಿಂಗ್ ಆಪ್‌ಗಳ ಮೇಲೆ ಚೀನಾ ನಿಷೇಧ ಹೇರಿದೆ. ಅಲ್ಲದೇ, ಅಂತರ್ಜಾಲದ ಮೇಲೆ ಚೀನಾ ಸರ್ಕಾರ ಬಿಗಿ ಹಿಡಿತ ಹೊಂದಿದೆ.

ಯುರೋಪ್ ಒಕ್ಕೂಟ ವಿಶ್ವದಲ್ಲೇ ಅತ್ಯಂತ ಮುಕ್ತ ಮಾರುಕಟ್ಟೆ ಎಂದು ಹೇಳುತ್ತಿದೆ. ಆದರೆ, ಇತ್ತೀಚೆಗೆ ರಾಷ್ಟ್ರೀಯ ನಿರ್ಬಂಧದ ಹೆಸರಿನಲ್ಲಿ ಬೇರೆ ದೇಶಗಳ ಕಂಪನಿಗಳ ಮೇಲೆ ನಿರ್ಬಂಧ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್ ಹೇಳಿದ್ದಾರೆ.

ಯುರೋಪ್ ಒಕ್ಕೂಟದ ಉದ್ಯೋಗಿಗಳು ತಮ್ಮ ಫೋನ್‌ಗಳಿಂದ ಟಿಕ್ ಟಾಕ್ ಅನ್ನು ಮಾರ್ಚ್ 15ರ ಒಳಗೆ ತೆಗೆದು ಹಾಕಬೇಕೆಂದು ತಿಳಿಸಲಾಗಿದೆ. ಸರ್ಕಾರ ನೀಡಿದ ಫೋನ್‌ನಲ್ಲಿ ಟಿಕ್‌ಟಾಕ್ ಬಳಸಿದ್ದಕ್ಕಾಗಿ ಯುರೋಪ್ ಒಕ್ಕೂಟದ ಕಾನೂನು ಸಚಿವರು ಇತ್ತೀಚೆಗೆ ಕ್ಷಮೆ ಯಾಚಿಸಿದ್ದರು.

ಟಿಕ್‌ಟಾಕ್ ನೂತನ ಡಿಜಿಟಲ್ ನಿಯಂತ್ರಣಗಳನ್ನು ಪಾಲಿಸಬೇಕು ಹಾಗೂ ತನ್ನ ಜಾಲದಲ್ಲಿರುವ ಅಕ್ರಮ ಮಾಹಿತಿಯನ್ನು ತೆಗೆದು ಹಾಕಬೇಕು ಎಂದು ಯುರೋಪ್ ಒಕ್ಕೂಟ ಇತ್ತೀಚೆಗೆ ಒತ್ತಡ ಹೇರಿತ್ತು.

# ಹರಿಹರ : ಸರ್ಕಾರಿ ನೌಕರರಿಂದ ಕರ್ತವ್ಯಕ್ಕೆ ಗೈರಾಗಿ ಮುಷ್ಕರ



ಹರಿಹರ, ಮಾ. 1 - ನಗರದಲ್ಲಿ ಸರ್ಕಾರಿ ನೌಕರರು ತಮ್ಮ ಬೇಡಿಕೆಗಾಗಿ ಆಗ್ರಹಿಸಿ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಮುಷ್ಕರ ಮಾಡಿದರು.

ತಹಶೀಲ್ದಾರ್ ಕಚೇರಿ, ನೋಂದಣಿ ಕಚೇರಿ, ಬೆಸ್ಕಾಂ ಕಚೇರಿ, ಆರೋಗ್ಯ ಇಲಾಖೆ, ತಾಪಂ ಇಲಾಖೆ, ಸರ್ವೆ ಇಲಾಖೆ, ಆಹಾರ ಇಲಾಖೆ, ಶಿಕ್ಷಣ ಇಲಾಖೆ ಸೇರಿದಂತೆ ತಾಲ್ಲೂಕಿನ ಬಹುತೇಕ ಇಲಾಖೆಯ ಸಿಬ್ಬಂದಿಗಳು ಕಚೇರಿಗಳಿಗೆ ಬೀಗವನ್ನು ಹಾಕಿ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಮತ್ತು ಶಾಲೆ - ಕಾಲೇಜು ಬಂದ್ ಮಾಡಿ ಶಾಂತಿಯುತ ಮುಷ್ಕರ ಮಾಡಿದರು.

ಸರ್ಕಾರಿ ನೌಕರರ ಮುಷ್ಕರ ದಿಂದ ಸಾರ್ವಜನಿಕರಿಗೆ ತೊಂದರೆಗಳು ಆಗದಂತೆ ಬಸ್ ಸಂಚಾರ, ನೀರು ಸರಬರಾಜು, ವಿದ್ಯುತ್ ಪೂರೈಕೆ, ಮತ್ತು ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರರೋಗಿಗಳಿಗೆ ತುರ್ತು ವೈದ್ಯಕೀಯ ಸೇವೆ, ಗರ್ಭಿಣಿಯರಿಗೆ ಹೆರಿಗೆ ಕೇಂದ್ರದಲ್ಲಿ ಚಿಕಿತ್ಸೆ, ಸೇರಿದಂತೆ ಇತರೆ ಸೌಲಭ್ಯಗಳು ಎಂದಿನಂತೆ ನಡೆದವು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್ ಮಾತನಾಡಿ, ತಾಲ್ಲೂಕಿನ 3 ಸಾವಿರ ನೌಕರರು ಕರ್ತವ್ಯಕ್ಕೆ ಗೈರಾಗಿದ್ದಾರೆ. ಶೇ.17ರಷ್ಟು ವೇತನ ಹೆಚ್ಚಳ ಮಾಡುವುದಾಗಿ ಹಾಗೂ ಹಳೆಯ ಪಿಂಚಣಿ ಪದ್ಧತಿ ಜಾರಿಗೆ ವರದಿ ಪಡೆಯುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಇದು ನಮಗೆ ಅಷ್ಟೊಂದು ತೃಪ್ತಿದಾಯಕವಲ್ಲವಾದರೂ, ರಾಜ್ಯ ಸಂಘದ ಸೂಚನೆಯಂತೆ ಹೋರಾಟದಿಂದ ತಾತ್ಕಾಲಿಕವಾಗಿ ಹಿಂದೆ ಸರಿಯುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಸರ್ಕಾರಿ ನೌಕರರಾದ ಅಂಗಡಿ ರೇವಣಸಿದ್ದಪ್ಪ, ಶರಣ್ ಕುಮಾರ್ ಹೆಗಡೆ, ಎಂ. ಉಮ್ಮಣ್ಣ, ಡಿ.ಟಿ. ಮಂಜುನಾಥ್, ಶಿವಮೂರ್ತಿ, ಶಿವಕುಮಾರ, ವಿಜಯ ಮಹಾಂತೇಶ್, ಡಾ ಹನುಮನಾಯ್ಕ್, ತಿಪ್ಪಣ್ಣರಾಜ್, ವಿ.ಬಿ. ಕೊಟ್ರೇಶ್, ರೂಪಾ, ರಾಧಾ, ಅಂಗಡಿ ಮಲ್ಲಿಕಾರ್ಜುನ, ಡಾ ನಾಗರಾಜ್, ಈಶಪ್ಪ ಬೂದಿಹಾಳ, ಸಿಡಿಪಿಓ ನಿರ್ಮಲ, ಪ್ರಕಾಶ್, ಆಶ್ರಫ್ ಅಲಿ, ಅರವಿಂದ್, ಎನ್.ಪಿ.ಎಸ್. ಮುಖಂಡ ಸಂಗಣ್ಣ ಕರಡಿ, ಪೂಜಾ, ಲಿಂಗಾರಾಜ್ ಮತ್ತಿತರರು ಹಾಜರಿದ್ದರು.

## ಸೆಂಟರ್ ಫಾರ್ ಪಾಲಿಸಿ ರೀಸರ್ಚ್ ಎಫ್.ಸಿ.ಆರ್.ಎ. ಅನುಮತಿ ರದ್ದು

ನವದೆಹಲಿ, ಮಾ. 1 – ಪ್ರಮುಖ ಚಿಂತಕರ ಸಂಸ್ಥೆಯಾದ ಸೆಂಟರ್ ಫಾರ್ ಪಾಲಿಸಿ ರೀಸರ್ಚ್‌ನ ಎಫ್.ಸಿ.ಆರ್.ಎ. ಅನುಮತಿಯನ್ನು ಕೇಂದ್ರ ಗೃಹ ಸಚಿವಾಲಯ ಆರು ತಿಂಗಳ ಕಾಲ ತಡೆದಿದೆ. ಕಾನೂನುಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರೇತರ ಸಂಘಟನೆಯಾಗಿರುವ ಸೆಂಟರ್ ಫಾರ್ ಪಾಲಿಸಿ ರೀಸರ್ಚ್ (ಸಿ.ಪಿ.ಆರ್.) ಹೇಳಿಕೆ ನೀಡಿದ್ದು, ಕಾನೂನು ಸಂಪೂರ್ಣವಾಗಿ ಪಾಲಿಸುತ್ತಿದ್ದೇವೆ. ಅಧಿಕಾರಿಗಳಿಗೆ ಪೂರ್ಣ ಸಹಕಾರ ನೀಡಲಾಗುವುದು ಎಂದು ತಿಳಿಸಿದೆ. ಈ ಹಿಂದೆ ಸಿ.ಪಿ.ಆರ್. ಹಾಗೂ ಆಕ್ಸ್‌ಫಾಮ್ ಇಂಡಿಯಾಗಳನ್ನು ಆದಾಯ ತೆರಿಗೆ ಪರಿಶೀಲನೆಗೆ ಒಳಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್.ಸಿ. ಆರ್.ಎ.) ಅನುಮತಿ ಉಲ್ಲಂಘನೆ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಕ್ಸ್‌ಫಾಮ್ ಸಂಸ್ಥೆಯ ಎಫ್.ಸಿ.ಆರ್.ಎ. ಅನುಮತಿಯನ್ನು ಜನವರಿಯಲ್ಲಿ ರದ್ದುಗೊಳಿಸಲಾಗಿತ್ತು

# ರಂಭಾಪುರಿ ಪೀಠದಲ್ಲಿ ನಾಳೆ ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

ಶ್ರೀ ರಂಭಾಪುರಿ ಪೀಠ (ಬಾಳೆಹೊನ್ನೂರು), ಮಾ.1- ನಾಡಿದ್ದು ದಿನಾಂಕ 3 ರಿಂದ 7ರ ವರೆಗೆ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ದಿನಾಂಕ 4 ರಂದು ಸಂಜೆ ಶ್ರೀ ವೀರಭದ್ರಸ್ವಾಮಿ ವಿಜಯೋತ್ಸವ ಹಾಗೂ ಜಾನಪದ ಹಬ್ಬವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಉದ್ಘಾಟಿಸುವರು.

ದಿನಾಂಕ 5ರ ಬೆಳಿಗ್ಗೆ ಜರುಗುವ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ, ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಹಾಗೂ ಶಿವಾದ್ವೈತ ಧರ್ಮ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಕೇಂದ್ರದ ರೈತ ಕಲ್ಯಾಣ ಇಲಾಖೆ ಸಚಿವೆ ಶೋಭಾ ಕರಂದ್ಲಾಜೆ ಭಾಗವಹಿಸುವರು.

**ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ:** 2023ರ ಶ್ರೀ ಪೀಠದ ಅತ್ಯುನ್ನತ 'ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ'ಯನ್ನು ಮಾಜಿ ಮುಖ್ಯಮಂತ್ರಿ-ಕೇಂದ್ರೀಯ ಚುನಾವಣಾ ಸಮಿತಿ ಸದಸ್ಯ ಬಿ.ಎಸ್.ಯಡಿಯೂರಪ್ಪನವರಿಗೆ ಪ್ರದಾನ ಮಾಡಲಾಗುವುದು. 'ರಂಭಾಪುರಿ ಬೆಳಗು' ಮಾಸ ಪತ್ರಿಕೆಯನ್ನು ಸಂಸದೀಯ ವ್ಯವಹಾರ ಮತ್ತು ಕಲ್ಲಿದ್ದಲು ಇಲಾಖೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಬಿಡುಗಡೆ ಮಾಡುವರು.

ಅ.ಭಾ.ವೀರಶೈವ ಶಿವಾಚಾರ್ಯ ಸಂಸ್ಥೆಯ ಅಧ್ಯಕ್ಷರಾದ ಮುಕ್ತಿಮಂದಿರದ ಶ್ರೀ ವಿಮಲ ರೇಣುಕ ವೀರ ಮುಕ್ತಿಮುನಿ ಶಿವಾಚಾರ್ಯರು ನೇತೃತ್ವ ವಹಿಸಲಿದ್ದು, ಹಂಪಸಾಗರದ ಶ್ರೀ ಶಿವಲಿಂಗ ರುದ್ರಮುನಿ ಶಿವಾಚಾರ್ಯರು ಪ್ರಾಸ್ತಾವಿಕ ನುಡಿಯುವರು. ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ಪ್ರಶಸ್ತಿ ವಾಚನ ಮಾಡುವರು.

ಇದಕ್ಕೂ ಮುನ್ನ ಶ್ರೀ ಪೀಠದಲ್ಲಿ ನಿರ್ಮಾಣಗೊಳ್ಳಲಿರುವ 51 ಅಡಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂಗಲ



ಮೂರ್ತಿ ಕಾರ್ಯಾರಂಭದ ಶಿಲಾನ್ಯಾಸವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೂಲ ಪೀಠದ

**ನಾಡಿದ್ದು ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ**

ನವೀಕರಣದ ಶಿಲಾನ್ಯಾಸವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೆರವೇರಿಸುವರು.

ದಿನಾಂಕ 6ರ ಸಂಜೆ 'ನೇಗಿಲ ಯೋಗಿಯ ನೆನಹು' ಕಾರ್ಯಕ್ರಮವನ್ನು ಮಾಜಿ ಉಪ ಮುಖ್ಯಮಂತ್ರಿ ಶಾಸಕ ಕೆ.ಎಸ್.ಈಶ್ವರಪ್ಪ ಉದ್ಘಾಟಿಸುವರು. 'ಡಾ. ಗುರುದೇವ ಶಿವಾಚಾರ್ಯ ಜೀವನ ದರ್ಶನ' ಕೃತಿಯನ್ನು ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡುವರು. ದಿನಾಂಕ 3 ರಂದು ಬೆಳಿಗ್ಗೆ ಧ್ವಜಾರೋಹಣ ಹರಿದ್ರಾಲೇಪನ ನಂತರ ಶ್ರೀ ವೀರಭದ್ರಸ್ವಾಮಿ ವಿಜಯೋತ್ಸವ-ಗುಗ್ಗುಳ ಮಹೋತ್ಸವ ಹೂಲಿಯ ಶ್ರೀ ಶಿವಸಿದ್ಧರಾಮೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಬಸವರಾಜ ನ್ಯಾಮತಿ ಇವರ ಉಸ್ತುವಾರಿಯಲ್ಲಿ ಜರುಗುವುದು.

ದಿನಾಂಕ 4ರ ಬೆಳಿಗ್ಗೆ ದೀಪೋತ್ಸವ-ಕುಂಕುಮೋತ್ಸವ ಹಾಗೂ ಶ್ರೀ ವೀರಭದ್ರಸ್ವಾಮಿ ಚಿಕ್ಕ ರಥೋತ್ಸವ ಜರುಗಲಿದ್ದು, ಸಂಜೆ 5 ಗಂಟೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯುವುದು.

ದಿನಾಂಕ 5ರ ಬೆಳಿಗ್ಗೆ ಶಿವದೀಕ್ಷಾ-ಅಯ್ಯಾಚಾರ ನೆರವೇರಲಿದ್ದು, ಅಪೇಕ್ಷಿತರು ಎರಡು ದಿನ ಮೊದಲು ತಮ್ಮ ಹೆಸರನ್ನು ಶ್ರೀ ಪೀಠದ ಕಾರ್ಯಾಲಯದಲ್ಲಿ ನೋಂದಾಯಿಸಬೇಕು. ಅಂದು ರಾತ್ರಿ 8-30 ಗಂಟೆಗೆ ಗಾನಗಂಧರ್ವ ಗುರುಸ್ವಾಮಿ ಕಲಕೇರಿ ಗದಗ ಸಂಗಡಿಗರಿಂದ ಭಕ್ತಿ ಗೀತೆಗಳ ಗಾನ ತರಂಗ ಏರ್ಪಡಿಸಲಾಗಿದೆ.

ದಿನಾಂಕ 6 ರಂದು ಶಯನೋತ್ಸವ, ಶ್ರೀ ಜಗದ್ಗುರು ಶಿವಾನಂದ ಎಸ್ಟೇಟ್‌ನಲ್ಲಿ ಪೂಜಾ ಪ್ರಸಾದ ವಿನಿಯೋಗ ಸಂಜೆ ಬಸವನಕೋವಿಯಲ್ಲಿ ಕೆಂಡಾರ್ಚನೆ ಜರುಗುವುದು.

ದಿನಾಂಕ 7ರಂದು ವಸಂತೋತ್ಸವ ಮತ್ತು ಭದ್ರಾ ನದಿ ತೀರದಲ್ಲಿ ಸುರಗಿ ಸಮಾರಾಧನೆ ನಡೆಯುವುದು.

# ಕೆಆರ್‌ಎಸ್ ಪಕ್ಷದ ಪ್ರಣಾಳಿಕೆ ಘೋಷಣೆ



ದಾವಣಗೆರೆ, ಮಾ. 1- ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಹಮ್ಮಿಕೊಳ್ಳಲಾಗಿರುವ ಕೆಆರ್‌ಎಸ್ ಪಕ್ಷ ಬೆಂಬಲಿಸಿ ಕರ್ನಾಟಕ ರಕ್ಷಿಸಿ ಎಂಬ ಘೋಷವಾಕ್ಯದೊಂದಿಗೆ 'ಕರುನಾಡು ಕಟ್ಟೋಣ – ಸಂಕಲ್ಪ ಯಾತ್ರೆ' ದಾವಣಗೆರೆಗೆ ಬಂದು ತಲುಪಿದೆ.

'ಏಳಿ ! ಎದ್ದೇಳಿ ! ವೀರ ಕನ್ನಡಿಗರೇ, ಭ್ರಷ್ಟರನ್ನು ತೊಲಗಿಸುವ ತನಕ ವಿರಮಿಸದಿರಿ' ಎಂದು ಕೆ.ಆರ್.ಎಸ್ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ ನೂರಾರು ವಾಹನಗಳೊಂದಿಗೆ ಯಾತ್ರೆ ಸಂಚರಿಸಲಿದೆ.

ಫೆ.27ರಂದು ರಾಮನಗರ ಜಿಲ್ಲೆಯ ಮಾಗಡಿಯಿಂದ ಪ್ರಾರಂಭವಾಗಿ ತುಮಕೂರು, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಾಗಿ ತುಮಕೂರಿನಲ್ಲಿ ಈ ಯಾತ್ರೆಯು ಸಮಾರೋಪಗೊಳ್ಳಲಿದೆ.

ಈಗಾಗಲೇ ಪಕ್ಷವು 82 ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದು, ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು, ಜನರ ಬಳಿಗೆ ತೆರಳಿ ತನ್ನ ಹಾಗೂ ಜೆಸಿಬಿ ಪಕ್ಷಗಳ ರಾಜಕೀಯ ವಿಚಾರಗಳನ್ನ ಕ್ಷೇತ್ರದ ಮತದಾರರಿಗೆ ಬಿಡಿಬಿಡಿಯಾಗಿ ವಿವರಿಸುತ್ತಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಪ್ರಣಾಳಿಕೆ ಘೋಷಿಸಿದ್ದು, ರಾಜ್ಯದಲ್ಲಿ ಖಾಲಿ ಇರುವ 3 ಲಕ್ಷ ಹುದ್ದೆಗಳಿಗ ಒಂದೇ ವರ್ಷದಲ್ಲಿ ನೇಮಕಾತಿ, ಲೋಕಾಯುಕ್ತ ಬಲಗೊಳಿಸುವುದು. ಸರ್ಕಾರಿ ನೌಕರರು, ಅಧಿಕಾರಿಗಳ ಮಾಹಿತಿ ಆನ್‌ಲೈನ್‌ನಲ್ಲಿ ಸಿಗುವ ಹಾಗೆ ಮಾಡುವುದು. ಬಡತನ ನಿರ್ಮೂಲನೆ, ಮದ್ಯನಿಷೇಧ ಜಾರಿ. ಹಣ್ಣು, ತರಕಾರಿ ಸಂರಕ್ಷಣೆಗೆ ಹೋಬಳಿಗೊಂದು ಶೈತ್ಯಾಗಾರ ನಿರ್ಮಾಣ ಮೊದಲಾದ ಬಗ್ಗೆ ಪ್ರಣಾಳಿಕೆಯಲ್ಲಿ ವಿವರಿಸಲಾಗಿದೆ.

# ಕೆಪಿಸಿಸಿ ಸದಸ್ಯರಾಗಿ ಗೂಳಿ ಮಲ್ಲಿಕಾರ್ಜುನ್



ಕೊಟ್ಟೂರು, ಫೆ.25- ಕೊಟ್ಟೂರಿನ ಕಾಂಗ್ರೆಸ್ ಮುಖಂಡ ಗೂಳಿ ಮಲ್ಲಿಕಾರ್ಜುನ್ ಅವರನ್ನು ಕೆಪಿಸಿಸಿ ಸದಸ್ಯರನ್ನಾಗಿ ಆಯ್ಕೆ ಮಾಡಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಆಯ್ಕೆ ಪತ್ರವನ್ನು ಶನಿವಾರ ಶಾಸಕ ಭೀಮನಾಯ್ಕ್ ಅವರು ಮಲ್ಲಿಕಾರ್ಜುನ್‌ರವರಿಗೆ ನೀಡಿ ಅಭಿನಂದಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಧಾರು ಕೇಶ್, ಪ.ಪಂ. ಸದಸ್ಯರಾದ ಮೈದೂರು ರಾಜೀವ್, ಕಾಸಲ್ ಪ್ರಕಾಶ್ ಹಾಜರಿದ್ದರು.

# ಕೊನೆಭಾಗಕ್ಕೆ ತಲುಪದ ನೀರು

**(1ನೇ ಪುಟದಿಂದ)** ಅಸಹಾಯಕತೆ ಪ್ರದರ್ಶನದ ಜೊತೆಗೆ ಕೈ ಕೈ ಮಿಲಾಯಿಸಿದ ಘಟನಾವಳಿ ನಂತರ ಅಚ್ಚುಕಟ್ಟಿನ ಕೊನೆಭಾಗಕ್ಕೆ ನೀರು ಏಕೆ ತಲುಪಿಲ್ಲ ಎಂದು ರೈತರು ಸಮಸ್ಯೆಯನ್ನು ಭದ್ರಾ ಎಸ್‌ಇ ಸುಜಾತಾ ಅವರ ಉಪಸ್ಥಿತಿಯಲ್ಲಿ ಚರ್ಚಿಸಿದರು.

ನೀರಿನ ಹರಿವಿನ ಪ್ರಮಾಣ ಸರಿ ಇರುವುದಿಲ್ಲ, ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂದು ರೈತ ಮುಖಂಡರಾದ ಸಿರಿಗೆರೆ ರುದ್ರಪ್ಪ, ಜಿಗಳಿಯ ಬಿಳಸನೂರು ಚಂದ್ರಪ್ಪ ಮತ್ತಿತರರು ಆಕ್ರೋಶ ವ್ಯಕ್ತ ಪಡಿಸಿದರು.

ಪ್ರತಿನಿತ್ಯ ಪಡೆಯುವ ಮಾಹಿತಿಯಂತೆ ಬಸವಾಪಟ್ಟಣ ಬಳಿಯ ನಿಯಂತ್ರಣ 2ರ ತನಕ ನಿಗದಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಮಲೇಬೆನ್ನೂರು ಭಾಗದಲ್ಲಿವಿತರಣೆ ಸರಿಯಾಗಿಲ್ಲ ಎಂದು ಇಇ ಪಟೇಲ್, ಎಇಇ ಚಂದ್ರಕಾಂತ್ ಅವರ ಜೊತೆಗೆ ರೈತರ ನೆರವಿಗೆ ಬರದ ಮತ್ತು ಕಾಡಾ ಸಭೆಗೆ ಬಾರದ ಜನಪ್ರತಿನಿಧಿಗಳನ್ನ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ತರಾಟೆಗೆ ತೆಗೆದುಕೊಂಡರು.

ರೈತರ ಸಂಕಷ್ಟದ ಸಮಯದಲ್ಲಿ ಅವರಿಗೆ ನೆರವಾಗಿ, ಮೊಬೈಲ್ ಕರೆ ಸ್ವೀಕರಿಸಿ, ಕೈತುಂಬ ಸಂಬಳ, ಸರ್ಕಾರದಿಂದ ವಾಹನ ಪಡೆದಿದ್ದೀರಿ, ಸರಿಯಾಗಿ ಕೆಲಸ ಮಾಡಲು ಆಗದಿದ್ದಲ್ಲಿ ಬೇರಡೆಗೆ ವರ್ಗಾವಣೆ ಮಾಡಿಸಿಕೊಂಡು ಹೋಗಿ ಅಥವಾ ನಿವೃತ್ತಿಪಡೆಯಿರಿ ಎಂದರು.

ಈ ವೇಳೆ ಎಂಜಿನಿಯರುಗಳು ಸಿಬ್ಬಂದಿ ಕೊರತೆ, ನೀರಿನ ಕೊರತೆ, ಮೇಲ್ಭಾಗದ ಅಕ್ರಮ ಪಂಪ್ ಸೆಟ್ ಸಮಸ್ಯೆಗಳನ್ನು ಸಭೆಯಲ್ಲಿ ಹೇಳಿದರು. ಒಂದು ಹಂತದಲ್ಲಿ ನಿಯಂತ್ರಣ 2 ರ ಮೇಲ್ಭಾಗದ ಅಕ್ರಮ ಪಂಪ್ ಸೆಟ್ ಗಳ ಏಕೆ ತೆರವು ಮಾಡಿಲ್ಲ, ನ್ಯಾಯಾಲಯ ಆದೇಶ ಉಲ್ಲಂಘನೆ ಮಾಡಿದ್ದೀರಿ ಎಂದು ನ್ಯಾಯಾಲಯಕ್ಕೆ ಹೋಗಿರುವ ರೈತರು ಆರೋಪಿಸಿದರು.

ಅಕ್ರಮ ಪಂಪ್ ಸೆಟ್ ತೆರವಿನ ವಿಚಾರದಲ್ಲಿ ಡಿಸಿ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚಿಸಿ ಕಾರ್ಯಾಚರಣೆ ನಡೆಸಬೇಕಿದೆ. ನಮ್ಮ ಇಲಾಖೆಯಿಂದ ಸಾಧ್ಯವಿಲ್ಲ, ಈಗಾಗಲೆ ಕಲ್ಲಿನಿಂದ ಹೊಡೆಸಿಕೊಂಡು ಬಂದಿದ್ದೇವೆ, ಪೊಲೀಸರ ಸಹಾಯ ಮಾಡುವುದಿಲ್ಲ ಎಂದು ಇಂಜಿನಿಯರ್ ಗಳು ಕೈ ಚೆಲ್ಲಿದರು.

ಮತ್ತೆ ಆಕ್ರೋಶಗೊಂಡ ರೈತರು ನೀವು ಅಕ್ರಮ ಪಂಪ್ ಹಾಕಿಕೊಂಡವರ ವಿರುದ್ಧ ಏಕೆ ನ್ಯಾಯಾಲಯದಲ್ಲಿ ಮೇಲಾಧಿಕಾರಿಗಳಿಗೆ ದೂರು ನೀಡಿಲ್ಲ ಎಂದು ಪ್ರಶ್ನಿಸಿದ ಘಟನೆಯೂ ನಡೆಯಿತು.

ಅಕ್ರಮ ಪಂಪ್ ಹಾಕಿಕೊಂಡವರು ಚೆನ್ನಾಗಿದ್ದಾರೆ, ಕೊನೆಭಾಗದ ರೈತ ಸಂಕಷ್ಟದಲ್ಲಿದ್ದಾನೆ ಎಂದು ರೈತರು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಅಚ್ಚುಕಟ್ಟಿನ ಯಾವಭಾಗದ ಜಮೀನಿಗೆ ನೀರು ತಲುಪಿಲ್ಲ ಪಟ್ಟಿ ನೀಡಿ ಎಂದು ಭದ್ರಾ ಎಸ್‌ಇ ಹೇಳಿದಾಗ, ಒಣಗಿದ ಭತ್ತದ ಗದ್ದೆಗೆ ಬಂದು ಸತ್ಯಾಸತ್ಯತೆ ಪರಿಶೀಲಿಸಿ ಎಂದು ರೈತರು ಪಟ್ಟು ಹಿಡಿದರು.

ಆಗ ವಿಧಿ ಇಲ್ಲದೆ ಅಧಿಕಾರಿಗಳ ತಂಡ ಕೊನೆಗೆ ನೀರಿಲ್ಲದೆ ಒಣಗಿರುವ ಕೊನೆಭಾಗದ ಕೆ.ಎನ್ ಹಳ್ಳಿ, ಹೊಳೆಸಿರಿಗೆರೆ, ಪಾಳ್ಯ ಮತ್ತಿತರರ ಗ್ರಾಮಗಳ ಜಮೀನುಗಳನ್ನು ಖುದ್ದು ಪರಿಶೀಲಿಸಿದರು. ನೀರಿನ ರೊಟೇಷನ್ ಮುಗಿಯುವುದರೊಳಗಾಗಿ ಈ ಭಾಗದ ರೈತರಿಗೆ ನೀರು ತಲುಪಿಸುವಂತೆ ಕಾಡಾಧ್ಯಕ್ಷರು ಇಂಜಿನಿಯರ್‌ಗಳಿಗೆ ತಾಕೀತು ಮಾಡಿದರು.

ದೇವರ ಬೆಳಕೆರೆ ಪಿಕಪ್ ಜಲಾಶಯದ ಗೇಟ್ ಸಮಸ್ಯೆ ಪರಿಹರಿಸಲು ಮಾ. 7 ರಂದು ಕೆಇಆರ್ ಸಿ ತಂಡ ಭೇಟಿ ನೀಡಲಿದ್ದು, ವರದಿ ಬಂದ ನಂತರ ಮುಂದಿನ ಕ್ರಮ ತೆಗೆದು ಕೊಳ್ಳುವುದಾಗಿ ಭದ್ರಾ ಎಸ್ ಇ ಸುಜಾತ ತಿಳಿಸಿದರು.



# ಅಧ್ಯಾತ್ಮಿಕತೆಯಲ್ಲಿ ಭಾರತ ವಿಶ್ವಕ್ಕೆ ಗುರುವಾಗಿದೆ

## ಜಗಳೂರು ತಾ. ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ



ಜಗಳೂರು, ಮಾ.1- ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಅಧ್ಯಾತ್ಮಿಕತೆಯಲ್ಲಿ ಭಾರತ ವಿಶ್ವಕ್ಕೇ ಗುರುವಾಗಿದೆ ಎಂದು ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು 2ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಬರಪೀಡಿತ ತಾಲ್ಲೂಕಿನಲ್ಲಿ ಆರ್ಥಿಕವಾಗಿ ಬಡತನವಿದೆ. ಬೆಳೆ ನಷ್ಟವಾಗಬಹುದು, ಸಾಹಿತ್ಯ ಸಂಗೀತ, ಧಾರ್ಮಿಕತೆಯಲ್ಲಿ ರಾಜ್ಯದಲ್ಲಿಯೇ ಹೆಮ್ಮೆ ತರುವಂತಿದೆ ಎಂದು ತಿಳಿಸಿದರು.

ವ್ಯಾಸ ಮಹರ್ಷಿಗಳು ಹೇಳಿದಂತೆ ಪ್ರಪಂಚದ ಪ್ರತಿಯೊಂದು ಜೀವರಾಶಿಗಳಿಗೆ ಕಷ್ಟದಲ್ಲಿರುವವರಿಗೆ ರಕ್ಷಣೆ ಮಾಡುವುದೇ ಪುಣ್ಯವಾಗಿದ್ದು, ಫಲಾಪೇಕ್ಷೆಯಿಲ್ಲದ ಪರೋಪಕಾರಿಯಾದರೆ ಪುಣ್ಯ ಪ್ರಾಪ್ತಿಯಾಗುತ್ತದೆ.

ನೆರಳು, ಗಾಳಿ, ಹಣ್ಣು, ಕಟ್ಟಿಗೆ, ನೀಡುವ ವೃಕ್ಷಗಳು, ಜೀವರಾಶಿಗಳಿಗೆ ಜಲದಾನ ಮಾಡುವ ನದಿ, ಹಳ್ಳ, ಹಾಲು ನೀಡುವ ಹಸುಗಳಂತೆ ಫಲಾಪೇಕ್ಷೆಗಳಿಲ್ಲದೆ ಪರೋಪಕಾರಿಯಾದರೆ ಪುಣ್ಯಪ್ರಾಪ್ತಿ. ಅದೇ ಮನುಷ್ಯ ದುರಾಸೆಯಿಂದ ಅಪಮಾನ, ನಿಂದನೆಗಳಂತಹ ಪಾಪ, ಕರ್ಮಗಳಿಂದ ದುಃಖ ಪ್ರಾಪ್ತಿ ಎಂದು ಪಾಪ-ಪುಣ್ಯದ ಬಗ್ಗೆ ನಿದರ್ಶನ ನೀಡಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಮುಂದಿನ ದಿನಗಳಲ್ಲಿ ತಾಲ್ಲೂಕಿನ ಕೊಣಚಗಲ್‌ನಲ್ಲಿರುವ ಅನುಭಾವ ಕವಿ ಮಹಾಲಿಂಗರಂಗ ಅವರ ಸಮಾಧಿ ಅಭಿವೃದ್ಧಿಗೊಳಿಸಬೇಕಿದೆ. ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಕ್ಷೇತ್ರವಾಗಿದೆ ಎಂದರು.

ಕನ್ನಡ ಪರ ಸಂಘಟನೆಗಳು ಸಾಮಾಜಿಕ ಚಿಂತನೆ ಮೈಗೂಡಿಸಿಕೊಂಡು, ಹೆಚ್ಚಿನ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಿ. ಸಾಹಿತ್ಯ ಲೋಕಕ್ಕೆ ತಾಲ್ಲೂಕಿನ ಹೆಚ್ಚು ಪ್ರತಿಭೆಗಳು ಪಾದಾರ್ಪಣೆ ಮಾಡಲಿ ಎಂದು ಮಾಜಿ ಶಾಸಕರು ಹಾರೈಸಿದರು.

ಸಂಘಟನೆಗಳ ಹೋರಾಟದ ಕನಸಿನ ಯೋಜನೆ ಭದ್ರಾ ಮೇಲ್ದಂಡೆ ಯೋಜನೆ ನೆನೆಗುದಿಗೆ ಬಿದ್ದಿದೆ.ಯಾವ ಮಾರ್ಗ ಎಂಬುದು ಗೊಂದಲವಿದೆ. ಆಡಳಿತ ಸರ್ಕಾರವಿರುವ ಹಾಲಿ ಶಾಸಕರು ಕಾಳಜಿ ವಹಿಸಬೇಕಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ಫ್ಲೋರೈಡ್ ಮುಕ್ತವನ್ನಾಗಿಸಬೇಕಿದೆ ಎಂದು ಹೇಳಿದರು.

ಕೆಪಿಸಿಸಿ ಎಸ್‌ಟಿ ಘಟಕದ ಅಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಆಡಳಿತ ಸರ್ಕಾರಗಳು ಸರ್ಕಾರಿ ಶಾಲೆಗಳ ಉಳಿವಿಗಾಗಿ ಕಾಳಜಿ ವಹಿಸಬೇಕಿದೆ. ಕನ್ನಡ ಭಾಷೆ ಉಳಿಸಬೇಕು. ಮೊಬೈಲ್‌ನಿಂದ ಯುವ ಸಮೂಹದಲ್ಲಿ ಸಾಹಿತ್ಯಾಸಕ್ತಿ ವಿಮುಖಗೊಳ್ಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿ ಪ್ರೊ. ಲಿಂಗಪ್ಪ ಮಾತನಾಡಿ, ಬಾಲ್ಯದಲ್ಲಿನ ಬಡತನದ ಬೆನ್ನಲ್ಲಿ ನಾನು ಅಕ್ಷರ ಕಲಿತು ಸರ್ಕಾರಿ ನೌಕರನಾದೆ. ನನ್ನ ತಂದೆ-ತಾಯಿಯವರ ಬಡತನ, ಆರ್ಥಿಕ ಪರಿಸ್ಥಿತಿ ನನಗೆ ಜೀವನದಲ್ಲಿ ಪಾಠ ಕಲಿಸಿತು. ನನ್ನ ಆರಂಭದ ವೃತ್ತಿ ಬದುಕಿನ ಯಾತ್ರೆಯ ಕಷ್ಟಕರವಾಗಿತ್ತು, ನನಗೆ ಸಮ್ಮೇಳನದ ಅಧ್ಯಕ್ಷ ಸ್ಥಾನ ದೊರೆತಿದ್ದು ಡಾ.ಬಿ. ಆರ್.ಅಂಬೇಡ್ಕರ್ ಕೊಡುಗೆ. ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ತು ನನ್ನ ಕೀರ್ತಿ ಹೆಚ್ಚಿಸಿತು ಎಂದು ಭಾವುಕರಾದರು.

ಈ ಸಂದರ್ಭದಲ್ಲಿ ಅಮರಭಾರತಿ ವಿದ್ಯಾಕೇಂದ್ರದ ಕಾರ್ಯದರ್ಶಿ ಟಿ. ಮಧು, ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಕಸಾಪ ತಾಲ್ಲೂಕು ಅಧ್ಯಕ್ಷೆ ಸುಜಾತಮ್ಮ, ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷ ಓಂಕಾರಪ್ಪ, ಪತ್ರಕರ್ತರ ಸಂಘದ ಅಧ್ಯಕ್ಷ ಚಿದಾನಂದಪ್ಪ, ನಿವೃತ್ತ ಪ್ರಾಂಶುಪಾಲ ಮಲ್ಲಿಕಾರ್ಜುನ್, ಯಾದವರೆಡ್ಡಿ, ದೊಣ್ಣೆಹಳ್ಳಿ ಗುರುಮೂರ್ತಿ, ನಾಗಲಿಂಗಪ್ಪ, ಓಬಣ್ಣ, ಮಹಾಲಿಂಗಪ್ಪ ಮತ್ತಿತರರು ಭಾಗವಹಿಸಿದ್ದರು.

# ನೌಕರರಿಗೆ ವೇತನ ಹೆಚ್ಚಳ

**(1ನೇ ಪುಟದಿಂದ)** ಹೆಚ್ಚಳಕ್ಕೆ ನಿರ್ಧರಿಸಲಾಗಿದ್ದು, ತಕ್ಷಣದಿಂದಲೇ ಈ ಆದೇಶ ಹೊರತರಲಾಗುವುದು ಎಂದರು.

ಏಳನೇ ವೇತನ ಆಯೋಗವನ್ನು ಈಗಾಗಲೇ ನೇಮಿಸಲಾಗಿದೆ. ಅವರಿಂದ ವರದಿ ಪಡೆದು, ಶೀಘ್ರದಲ್ಲೇ ವೇತನ ಪರಿಷ್ಕರಣೆಗೆ ಪ್ರಯತ್ನ ನಡೆಯುತ್ತಿದೆ. ಈಗ ಮಧ್ಯಂತರ ಪರಿಹಾರ ಘೋಷಿಸಲು ತೀರ್ಮಾನ ಕೈಗೊಂಡಿದ್ದೇವೆ.

ಹಳೆಯ ಪಿಂಚಣಿ ಪದ್ಧತಿ ಮರು ಜಾರಿಗೊಳಿಸಬೇಕೆಂಬ ಬೇಡಿಕೆಯನ್ನು ನೌಕರರ ಸಂಘ ಮುಂದಿಟ್ಟಿದ್ದು, ಈ ಕುರಿತು ಅಧ್ಯಯನ ನಡೆಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಹಳೇಯ ಪಿಂಚಣಿ ಪದ್ದತಿ ಕುರಿತು ಸಮಿತಿ ಅಧ್ಯಯನ ನಡೆಸಿ ವರದಿ ನೀಡಲಿದೆ. ನಂತರ ಮುಂದಿನ ಕ್ರಮ ಜರುಗಿಸಲಾಗುವುದು ಎಂದರು.

ಎರಡು ವಿಷಯಗಳಲ್ಲಿ ಸರ್ಕಾರ ಮತ್ತು ನೌಕರರ ಸಂಘ ಒಪ್ಪಂದಕ್ಕೆ ಬಂದಿವೆ. ಈ ಒಪ್ಪಂದದ ಅನ್ವಯ ಆದೇಶ ಹೊರಬೀಳಲಿದೆ ಎಂದು ಬೊಮ್ಮಾಯಿ ಹೇಳಿದರು.

ಸರ್ಕಾರದ ಘೋಷಣೆಯಾಗುತ್ತಿದ್ದಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಂತ ಪರಿಹಾರ ಹಾಗೂ ಹಳೆಯ ಪಿಂಚಣಿ ಪದ್ಧತೆ ಮರು ಜಾರಿ ಕುರಿತು ಅಧ್ಯಯನಕ್ಕೆ ಉನ್ನತ ಮಟ್ಟದ ಸಮಿತಿ ನೇಮಿಸಲು ಸರ್ಕಾರ ಆದೇಶ ಹೊರಡಿಸಿರುವುದರಿಂದ ಮುಷ್ಕರ ಅಂತ್ಯಗೊಳಿಸಿದ್ದೇವೆ ಎಂದು ಪ್ರಕಟಿಸಿದರು.

ಶೇ.40 ರಷ್ಟು ವೇತನ ಹೆಚ್ಚಳ ಸೇರಿದಂತೆ ಎಲ್ಲಾ ಬೇಡಿಕೆ ಗಳು ಈಡೇರಬೇಕು. ಈಗ ತಾತ್ಕಾಲಿಕವಾಗಿ ಮುಷ್ಕರ ಸ್ಥಗಿತವಾಗಿದೆ. ಮುಂದಿನ ದಿನಗಳಲ್ಲಿ ಬೇಡಿಕೆ ಈಡೇರದಿದ್ದರೆ, ಮತ್ತೆ ಹೋರಾಟ ಆರಂಭಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

# ನೌಕರರಿಂದ ಉತ್ತಮ ಸ್ಪಂದನೆ

**(1ನೇ ಪುಟದಿಂದ)** ಎಂಬಂತೆ ಬೇರೆ ಆಸ್ಪತ್ರೆಗಳತ್ತ ತೆರಳುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ, ಗುತ್ತಿಗೆ ಆಧಾರದಲ್ಲಿರುವವರು ಕೆಲಸ ಮಾಡಿದರು. ಒಳರೋಗಿಗಳಿಗೆ ತೊಂದರೆಯಾಗದಂತೆ ನೋಡಿಕೊಂಡರು.

ಶಾಲಾ-ಕಾಲೇಜುಗಳಲ್ಲಿ ಪಾಠಗಳು ನಡೆಯಲಿಲ್ಲ. ಶಾಲಾ ವಿದ್ಯಾರ್ಥಿಗಳಿಗೆ ಮೊದಲೇ ರಜೆ ಹೇಳಲಾಗಿತ್ತು. ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗಳೂ ನಡೆಯಲಿಲ್ಲ.

ಕಾಲೇಜು ವಿದ್ಯಾರ್ಥಿಗಳೂ ಕಾಲೇಜು ಬಳಿ ಸುಳಿಯಲಿಲ್ಲ. ಬಂದ ಕೆಲ ವಿದ್ಯಾರ್ಥಿಗಳು ಅಲ್ಲಲ್ಲಿ ಹರಟೆ ಹೊಡೆಯುವಲ್ಲಿ ನಿರತರಾಗಿದ್ದುದು ಕಂಡು ಬಂತು. ಸರ್ಕಾರಿ ಡಿಆರ್‌ಆರ್ ಪಾಲಿಟೆಕ್ನಿಕ್‌ನಲ್ಲಿ ಮೌಲ್ಯಮಾಪನಕ್ಕೆ ಬಂದವರು ಹಿಂದಿರುಗಿದರು.

ಇನ್ನು ಮಹಾನಗರ ಪಾಲಿಕೆ, ಆರ್‌ಟಿಒ ಕಚೇರಿ, ತಹಶೀಲ್ದಾರ್ ಕಚೇರಿ, ಕಂದಾಯ ಇಲಾಖೆ ಸೇರಿದಂತೆ ಬಹುತೇಕ ಇಲಾಖೆಗಳ ಕಚೇರಿಗಳು ಬಾಗಿಲು ಮುಚ್ಚಲ್ಪಟ್ಟಿದ್ದವು.

# ವಿಜಯ ಸಂಕಲ್ಪ ಯಾತ್ರೆಗೆ ನಡ್ಡಾ ಚಾಲನೆ



ಚಾಮರಾಜನಗರ, ಮಾ. 1 – 'ವಿಜಯ ಸಂಕಲ್ಪ ಯಾತ್ರೆ'ಯ ಮೊದಲನೇ ಭಾಗಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಚಾಲನೆ ನೀಡಿದ್ದಾರೆ. ರಾಜ್ಯದ ನಾಲ್ಕು ಭಾಗಗಳಿಂದ ವಿಜಯ ಸಂಕಲ್ಪ ರಥಯಾತ್ರೆ ಆರಂಭವಾಗಿ ದಾವಣಗೆರೆಯಲ್ಲಿ ಸೇರಲಿವೆ.

ಮಲೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿದ ನಡ್ಡಾ, ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಯಾತ್ರೆಗೆ ಚಾಲನೆ ನೀಡಿದ್ದಾರೆ.

ಅವರ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತಿತರರಿದ್ದರು.

ನಂತರ ಸೋಲಿಗ ಬುಡಕಟ್ಟು ಸಮುದಾಯದ ಸಮಾವೇಶದಲ್ಲಿ ಮಾತನಾಡಿದ ನಡ್ಡಾ, ಈ ಪವಿತ್ರ ಸ್ಥಳದಿಂದ ವಿಜಯ ಸಂಕಲ್ಪ ಯಾತ್ರೆ ಆರಂಭವಾಗಿದೆ. ದೇವರ ದಯೆಯಿಂದ, ಮುಂಬರುವ ಚುನಾವಣೆಯಲ್ಲಿ ಜನರ ಆಶೀರ್ವಾದ ಬಿಜೆಪಿಗೆ ದೊರೆಯುವ ವಿಶ್ವಾಸ ಇದೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶ ಬಲಿಷ್ಠವಾಗಿ ಮುನ್ನಡೆಯುತ್ತಿದೆ. ಮೋದಿ ಅವರು ಜಾತಿವಾದ, ಮತ ಬ್ಯಾಂಕ್ ಹಾಗೂ ವಂಶವಾದಿ ರಾಜಕೀಯದಿಂದ ದೇಶವನ್ನು ಹೊರ ತಂದಿದ್ದಾರೆ. 'ಸಬ್ಕಾ ಸಾಥ್ ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್ ಸಬ್ಕಾ ಪ್ರಯಾಸ್' ಎಂಬುದು ಎಲ್ಲರೂ ಜೊತೆಯಾಗಿ ಮುಂದೆ ಸಾಗುವ ಸೂತ್ರವಾಗಿದೆ ಎಂದರು.

ಭಾರತ ಈಗ ಬ್ರಿಟನ್ ಹಿಂದೆ ಹಾಕಿ ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿದೆ. ಫಾರ್ಮ, ಮೊಬೈಲ್ ಹಾಗೂ ಆಟೋಮೊಬೈಲ್ ಸೇರಿದಂತೆ ಹಲವು ವಲಯಗಳಲ್ಲಿ ಮುನ್ನಡೆಯುತ್ತಿದೆ ಎಂದವರು ಹೇಳಿದರು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಮಾಜದ ಎಲ್ಲ ವಲಯಗಳು, ವಿಶೇಷವಾಗಿ ಬಡವರು ಹಾಗೂ ತುಳಿತಕ್ಕೊಳಗಾದವರ ಏಳಿಗೆಗೆ ಶ್ರಮಿಸುತ್ತಿದೆ. ದೇಶದ ಪ್ರಮುಖ ಹುದ್ದೆಗಳಲ್ಲಿ ಈಗ ಪರಿಶಿಷ್ಟ ಜಾತಿ ಹಾಗೂ ಸಮುದಾಯದವರಿದ್ದಾರೆ. ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಬುಡಕಟ್ಟು ಸಮುದಾಯದವರು ಎಂದು ಹೇಳಿದರು. ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಬುಡಕಟ್ಟು ಸಮುದಾಯಕ್ಕೆ ನೀಡಲಾಗುವ ಬಜೆಟ್ ಅನುದಾನ ಶೇ.190ರಷ್ಟು ಹೆಚ್ಚಾಗಿದೆ. ಏಕಲವ್ಯ ವಿದ್ಯಾಲಯಗಳನ್ನು ಬುಡಕಟ್ಟು ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಬಡುಕಟ್ಟು ಸಮುದಾಯದವರ ನೆರವಿಗೆ ಬುಡಕಟ್ಟು ಸಂಶೋಧನಾ ಕೇಂದ್ರಗಳ ಸ್ಥಾಪನೆ ಸೇರಿದಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬೆಳಗಾವಿ ಜಿಲ್ಲೆಯ ನಂದಗಡದಲ್ಲಿ ನಾಳೆ ಮಾ.2ರಂದು ಎರಡನೇ ರಥಯಾತ್ರೆಗೆ ಚಾಲನೆ ನೀಡಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಮಾರ್ಚ್ 3ರಂದು ಬೆಂಗಳೂರಿನ ದೇವನಹಳ್ಳಿಯಲ್ಲಿ ರಥಯಾತ್ರೆಗೆ ಚಾಲನೆ ನೀಡಲಿದ್ದಾರೆ.

20 ದಿನಗಳ ಯಾತ್ರೆಯ ನಂತರ ಮಾರ್ಚ್ 25ರಂದು ದಾವಣಗೆರೆಗೆ ಯಾತ್ರೆಗಳು ತಲುಪಲಿವೆ. ಇಲ್ಲಿ ನಡೆಯುವ ಸಮಾವೇಶವನ್ನು ಉದ್ದೇಶಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾತನಾಡಲಿದ್ದಾರೆ.

ಈ ನಡುವೆ, ಮಲೆ ಮಹದೇಶ್ವರ ಬೆಟ್ಟದಲ್ಲಿ ಆರಂಭವಾದ ಬಿಜೆಪಿಯ ವಿಜಯ ಸಂಕಲ್ಪ ರಥಯಾತ್ರೆಗೆ ವಿಘ್ನ ಎದುರಾಗಿದ್ದು ವಸತಿ ಸಚಿವ ವಿ.ಸೋಮಣ್ಣ ಯಾತ್ರೆಯಿಂದ ದೂರ ಉಳಿದಿದ್ದಾರೆ. ಹಲವು ಕಾರಣಗಳಿಂದ ಸೋಮಣ್ಣ ಅಸಮಾಧಾನಗೊಂಡಿರುವುದೇ ಅವರು ಯಾತ್ರೆಯಿಂದ ದೂರ ಉಳಿಯಲು ಕಾರಣ ಎನ್ನಲಾಗುತ್ತಿದೆ.

# ಅಡುಗೆ ಅನಿಲದ ಬೆಲೆ ಏರಿಕೆ

**(1ನೇ ಪುಟದಿಂದ)** ಮುಗಿದ ನಂತರ ಬೆಲೆ ಏರಿಕೆ ಮಾಡಲಾಗಿದೆ. ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ಬೆಲೆ ಏರಿಕೆಯಲ್ಲಿ ವ್ಯತ್ಯಾಸವಾಗಲಿದೆ. ಇದೇ ವೇಳೆ ವಾಣಿಜ್ಯ ಬಳಕೆಯ ಅಡುಗೆ ಅನಿಲದ ಸಿಲಿಂಡರ್ ಬೆಲೆಯನ್ನು 350 ರೂ.ಗಳಷ್ಟು ಹೆಚ್ಚಿಸಲಾಗಿದೆ. ಕಳೆದ ಜನವರಿಯಲ್ಲಿ ವಾಣಿಜ್ಯ ಅಡುಗೆ ಅನಿಲದ ಬೆಲೆಯನ್ನು 25 ರೂ. ಹೆಚ್ಚಿಸಲಾಗಿತ್ತು. ಬೆಲೆ ಹೆಚ್ಚಳವನ್ನು ಟೀಕಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿ ಸರ್ಕಾರದ ಅವಧಿಯಲ್ಲಿನ ಹಣದುಬ್ಬರದಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ ಎಂದಿದ್ದಾರೆ. ಈ ನಡುವೆ, ವೈಮಾನಿಕ ಇಂಧನವಾದ ಎ.ಟಿ.ಎಫ್. ಬೆಲೆಯನ್ನು ಶೇ.4 ರಷ್ಟು ಇಳಿಸಲಾಗಿದೆ. ದೆಹಲಿಯಲ್ಲಿ ಕಿಲೋ ಲೀಟರ್ ಎ.ಟಿ.ಎಫ್. ಬೆಲೆ ಈಗ 1.07 ಲಕ್ಷ ರೂ.ಗಳಾಗಿದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಸತತ 11 ತಿಂಗಳಿನಿಂದ ಯಥಾಸ್ಥಿತಿಯಲ್ಲಿವೆ. ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಕಳೆದ ವರ್ಷ ಏಪ್ರಿಲ್ 6ರ ನಂತರ ಬೆಲೆಗಳನ್ನು ಪರಿಷ್ಕರಿಸಿಲ್ಲ.

# ಗುಮ್ಮನೂರಿನಲ್ಲಿ ಇಂದು ಸಾಮೂಹಿಕ ವಿವಾಹ

ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ಶ್ರೀ ಗುರುಬಸವೇಶ್ವರ ಸ್ವಾಮಿಯ ರಥೋತ್ಸವ ಕಾರ್ಯಕ್ರಮಗಳು ನಡೆಯುತ್ತಿದ್ದು, ಇಂದು ಬೆಳಿಗ್ಗೆ 10 ಗಂಟೆಗೆ ಸಾಮೂಹಿಕ ವಿವಾಹ ಮತ್ತು ಪ್ರಸಾದ ಏರ್ಪಡಿಸಲಾಗಿದೆ. 11 ಗಂಟೆಯಿಂದ ಜಂಗೀ ಕುಸ್ತಿ ಸ್ಪರ್ಧೆ ನಡೆಯುವುವು.

ಅಂದು ರಾತ್ರಿ 10 ಗಂಟೆಗೆ 'ಧರ್ಮವಂತರ ಮನೆತನ' ಸಾಮಾಜಿಕ ನಾಟಕ ಪ್ರದರ್ಶನ ಏರ್ಪಡಿಸಿದೆ.

# ಓಪಿಎಸ್ ಹೊರಾಟ : ರೋಗಿಗಳ ಪರದಾಟ

ಜಗಳೂರು, ಮಾ1- ಸರ್ಕಾರಿ ನೌಕರರು ವೇತನ ಪರಿಷ್ಕರಣೆ, ಓಪಿಸ್ ಜಾರಿಗಾಗಿ ಆಗ್ರಹಿಸಿ ನಡೆಯುತ್ತಿ ರುವ ಅನಿರ್ದಿಷ್ಟಾವಧಿ ಧರಣಿ ಹಿನ್ನೆಲೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಗೈರು ಹಾಜರಿಯಿಂದಾಗಿ ರೋಗಿಗಳು ಪರದಾಡುವಂತಾಗಿತ್ತು. ಬೆಳಿಗ್ಗೆ ಯಿಂದ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡಿಲ್ಲ, ನಮ್ಮ ಬಳಿ ವೈದ್ಯರು, ನರ್ಸ್‌ಗಳು ಯಾರೂ ಕೂಡ ಸುಳಿದಿಲ್ಲ ಎಂದು ರೋಗಿಗಳು ಅಳಲು ತೋಡಿಕೊಂಡರು. ಹೊರ ರೋಗಿಗಳು ದಿನವಿಡೀ ಚಿಕಿತ್ಸೆಗಾಗಿ ಪರದಾಡುವಂತಾ ಗಿತ್ತು. ಪ್ರತಿಭಟನೆ ಹಿನ್ನೆಲೆ ಪಟ್ಟಣದ ಸರ್ಕಾರಿ ಕಚೇರಿ ಗಳು, ಶಾಲಾ - ಕಾಲೇಜುಗಳು ಬಿಕೋ ಎನ್ನುತ್ತಿದ್ದವು.



ಜಗಳೂರು

# ಆಪ್ ತೊರೆದು ಬಿಜೆಪಿ ಸೇರಿದ ನಿ. ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್

ಬೆಂಗಳೂರು, ಮಾ. 1 - ಆಮ್ ಆದ್ಮಿ ಪಕ್ಷದ ಕಾರ್ಯವೈಖರಿಯಲ್ಲಿ ಬೆಳವಣಿಗೆ ಕಂಡು ಬಾರದ ಹಿನ್ನೆಲೆಯಲ್ಲಿ ರಾಷ್ಟ್ರೀಯವಾದದ ಸನಾತನ ಪರವಾದ ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಬಿಜೆಪಿಗೆ ಸೇರುತ್ತಿದ್ದೇನೆ. ಬಿಜೆಪಿ ನಾಯಕರ ಸದೃಢ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನನ್ನ ಕೊಡುಗೆ ನೀಡುತ್ತೇನೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್ ತಿಳಿಸಿದ್ದಾರೆ.

ಆಮ್ ಆದ್ಮಿ ಪಕ್ಷಕ್ಕೆ ಗುಡ್ ಬೈ ಹೇಳಿದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಇಂದು ಬಿಜೆಪಿ ಸೇರ್ಪಡೆಯಾದರು. ಮಲ್ಲೇಶ್ವರದಲ್ಲಿರುವ ರಾಜ್ಯ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದರು. ಪಕ್ಷದ ಶಾಲು ಹಾಕಿ, ಧ್ವಜ ನೀಡಿ ಭಾಸ್ಕರ್ ರಾವ್ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು. ಭಾಸ್ಕರ್ ರಾವ್ ಜತೆ ಅವರ ಬೆಂಬಲಿಗರು ಕೂಡ ಬಿಜೆಪಿಗೆ ಸೇರ್ಪಡೆಯಾದರು. ರಾವ್ ಅವರು ಆಮ್ ಆದ್ಮಿ ಪಾರ್ಟಿಯಲ್ಲಿ ರಾಜ್ಯ ಉಪಾಧ್ಯಕ್ಷರಾಗಿದ್ದರು.



ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲಿ ಪೊಲೀಸ್ ಅಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದ ಭಾಸ್ಕರ್ ರಾವ್ ಅವರನ್ನು ಇತ್ತೀಚೆಗೆ ಪಕ್ಷದ ಪ್ರಣಾಳಿಕೆ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ರಾಜ್ಯದಲ್ಲಿ ಪಕ್ಷವು ನೆಲೆ ಕಂಡುಕೊಳ್ಳಲು ವೇದಿಕೆ ರೂಪಿಸಿಕೊಳ್ಳುತ್ತಿದೆ. ಈ ವೇಳೆಯಲ್ಲಿ ರಾವ್ ಪಕ್ಷದಲ್ಲಿ ಪ್ರ ಮು ಖ ರಾ ಗಿ ಗುರುತಿಸಿಕೊಂಡಿದ್ದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಾರ್ಚ್ 4ರ ಶನಿವಾರದಂದು ದಾವಣಗೆರೆಯಲ್ಲಿ ನಡೆಯುವ ಸಮಾವೇಶಕ್ಕೆ ಆಗಮಿಸುತ್ತಿದ್ದಾರೆ. ಈ ಸಮಾವೇಶದ ಮೂಲಕ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಛಾಪು ಮೂಡಿಸಲು ಆಮ್ ಆದ್ಮಿ ಪಾರ್ಟಿ ಯೋಜಿಸಿತ್ತು. ಈ ನಡುವೆಯೇ ರಾವ್ ನಿರ್ಗಮನ ಪಕ್ಷಕ್ಕೆ ಶಾಕ್ ನೀಡಿದೆ. ಪಕ್ಷ ಸೇರ್ಪಡೆ ನಂತರ ಮಾತನಾಡಿದ ಭಾಸ್ಕರ್ ರಾವ್, ಇಂದು ಬಹಳ ಸಂತೋಷದ ದಿನ. ಮರಳಿ ಸನಾತನ ಧರ್ಮಕ್ಕೆ ಸೇರಿರುವ ಪಕ್ಷಕ್ಕೆ ಹಾಗೂ ರಾಷ್ಟ್ರೀಯತೆಗೆ ಬದ್ಧತೆ ಇರುವ ಪಕ್ಷಕ್ಕೆ ಸೇರ್ಪಡೆಯಾಗಿದ್ದೇನೆ. ಇದು ಖುಷಿ ತಂದಿದೆ. ಬಾಲ್ಯದಿಂದಲೇ ನಾನು ರಾಷ್ಟ್ರೀಯತೆ, ಸನಾತನ ಧರ್ಮಕ್ಕೆ ಬದ್ಧವಾಗಿದ್ದೆ ಎಂದಿದ್ದಾರೆ.

ಪೊಲೀಸ್ ಅಧಿಕಾರಿಯಾಗಿದ್ದ ನಾನು ಸ್ವಯಂ ನಿವೃತ್ತಿ ಬಳಿಕ ಕೆಲಕಾಲ ಉತ್ಸಾಹದಿಂದ ರಾಜಕಾರಣದಲ್ಲಿ ಬದಲಾವಣೆ ತರಲು ಕೆಲಸ ಮಾಡುವ ಆಸೆ ಹೊಂದಿದ್ದ. ಆದರೆ ಆಮ್ ಆದ್ಮಿ ಪಕ್ಷದಲ್ಲಿ ಒಂದು ವರ್ಷ ಇದ್ದರೂ ಆ ಪಕ್ಷ ಕರ್ನಾಟಕದಲ್ಲಿ ಬೆಳೆಯಲು ಸಾಧ್ಯವೇ ಆಗುತ್ತಿಲ್ಲ. ಬಹಳಷ್ಟು ಪ್ರಯತ್ನಪಟ್ಟೆ. ಆದರೆ ಆಗಲಿಲ್ಲ. ಅವರ ಕಾರ್ಯ ವೈಖರಿಯಲ್ಲಿಯೂ ಬೆಳವಣಿಗೆ ಕಂಡು ಬಂದಿಲ್ಲ. ನನಗೆ ಈಗ 58 ವರ್ಷವಾಗಿದೆ, ಹಾಗಾಗಿ ಸಮಯವನ್ನು ವ್ಯರ್ಥ ಮಾಡದೆ ಒಂದು ಉತ್ತಮ ಪಕ್ಷಕ್ಕೆ ಸೇರಿ ಕೆಲಸ ಮಾಡಬೇಕು ಎಂದು ನಿರ್ಧರಿಸಿದೆ ಎಂದರು.

ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್ ಸಂತೋಷ್, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ ಪಿ ನಡ್ಡಾ, ಮಾಜಿ ಸಿಎಂ ಯಡಿಯೂರಪ್ಪ, ಕಟೀಲ್, ಸಿಎಂ ಬೊಮ್ಮಾಯಿ ಎಲ್ಲಾ ಹಿರಿಯರ ಮಾರ್ಗದರ್ಶನದಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನಾನು ಭಾಗಿಯಾಗಲು ನನ್ನದೇ ಆದ ಅನುಭವಗಳನ್ನು ಹಂಚಿಕೊಳ್ಳುತ್ತೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ನಾನು ಪೂರ್ಣ ರೀತಿಯ ಸಹಕಾರ ನೀಡಲು ಬಂದಿದ್ದೇನೆ. ರಾಷ್ಟ್ರ ನಿರ್ಮಾಣಕ್ಕೆ ನನ್ನ ಕೊಡುಗೆಯನ್ನು ಕೊಡುತ್ತೇನೆ ಎಂದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2855/2022–23 ದಿನಾಂಕ: 01.03.2023

**ಸಂಧಾನ ಪ್ರಕಟಣೆ ಸಂಖ್ಯೆ: 11/2022–23**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, **ಹರಿಹರ ಬಸ್ ನಿಲ್ದಾಣದ** ದ್ವಿ-ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ 03 ವರ್ಷ) ಹಾಗೂ **ಮಲೆಬೆನ್ನೂರು** ಜನರಲ್ ಮಳಿಗೆ ಸಂಖ್ಯೆ–01ಕ್ಕೆ (ಶಾಶ್ವತ ಸ್ಥಳ 05 ವರ್ಷ) ಪರವಾನಗಿದಾರರನ್ನು ಆಯ್ಕೆ ಮಾಡಲು **ಸಂಧಾನದ ಮೂಲಕ** (ಮಾತುಕತೆಯ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ksrtc.karnataka.gov.in ನಿಂದ ದಿನಾಂಕ: 01.03.2023ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿಗಳು – 7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.

ಸಹಿ/–

ವಿಭಾಗೀಯ ನಿಯಂತ್ರಣಾಧಿಕಾರಿ

ದಾವಣಗೆರೆ ವಿಭಾಗ, ದಾವಣಗೆರೆ

ವಾಸಾಸಂಇ/ಬೆಂ.ನಗರ/5003/ಆಕಾರ್/2022–23

## ಕಟ್ಟಿಗೆಹಳ್ಳಿ ಶ್ರೀ ಬಸವೇಶ್ವರ ರಥೋತ್ಸವ



ಜಗಳೂರು, ಮಾ.1- ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಬುಧವಾರ ಸಂಜೆ 5.30ಕ್ಕೆ ಸರಿಯಾಗಿ ಮೂಲಾ ನಕ್ಷತ್ರದ ಮುಹೂರ್ತದಲ್ಲಿ ಅದ್ಧೂರಿಯಾಗಿ ನೆರವೇರಿತು.

ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ತೇರಿಗೆ ಬಾಳೆಹಣ್ಣು ಕಾಯಿ ಸಮರ್ಪಿಸಿ ಭಕ್ತಿಯಿಂದ ಶ್ರೀ ಬಸವೇಶ್ವರ ಸ್ವಾಮೀಗೆ ನಮಿಸಿದರು.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಗ್ರಾಮ ನಂದಿಹಳ್ಳಿ ಗ್ರಾಮದ ಭಕ್ತರು ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಿದ್ದರು. ಚಿತ್ರದುರ್ಗ, ಶಿವಮೊಗ್ಗ, ಬೆಂಗಳೂರು, ತುಮಕೂರು, ಚನ್ನಗಿರಿ, ದಾವಣಗೆರೆ, ಜಗಳೂರು, ಕೊಟ್ಟೂರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

## ಹಂಪನೂರಿನಲ್ಲಿ ಇಂದು ಆನೆ ಉತ್ಸವ

ಚಿತ್ರದುರ್ಗ ತಾಲ್ಲೂಕು ಹಂಪನೂರಿನಲ್ಲಿ ನಡೆಯುತ್ತಿರುವ ಶ್ರೀ ರಂಗನಾಥ ಸ್ವಾಮಿ ನೂತನ ರಥೋತ್ಸವ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ನೂತನ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಕ್ಕೆ ಶ್ರೀ ರಂಗನಾಥಸ್ವಾಮಿಯ ಆನೆ ಉತ್ಸವ ನಡೆಯಲಿದೆ. ಅದೇ ದಿನ ಬೆಳಗಿನ ಜಾವ 4 ಕ್ಕೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ರಂಗನಾಥಸ್ವಾಮಿಯ ನೂತನ ಮಹಾರಥೋತ್ಸವ ನೆರವೇರಲಿದೆ. ದಿನಾಂಕ 3 ರ ಶುಕ್ರವಾರ ಬೆಳಗಿನಜಾವ 4 ಕ್ಕೆ ಓಕುಳಿ ನಡೆಯುವುದು.

# ಜಿಲ್ಲಾ ವಿಶ್ವಕರ್ಮ ಗುರುಪೀಠ ಸ್ಥಾಪನೆಗೆ ಚಾಲನೆ



ದಾವಣಗೆರೆ, ಮಾ.1- ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಮಾಜದ ಅಸ್ತಿತ್ವ ಉಳಿಸಲು ಪೀಠ ಸ್ಥಾಪನೆ ಅವಶ್ಯಕವಾಗಿದೆ ಎಂದು ಶಿರಸಂಗಿ ಕಾಳಿಕಾ ದೇವಸ್ಥಾನ ಅಧ್ಯಕ್ಷ ಪಿ.ಬಿ. ಬಡೀಗೇರ್ ಹೇಳಿದರು.

ಬುಧವಾರ ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಜಿಲ್ಲಾ ವಿಶ್ವಕರ್ಮ ಸಮಾಜದ ವತಿಯಿಂದ ಇಂದು ಹಮ್ಮಿಕೊಂಡಿದ್ದ ವಿಶ್ವಕರ್ಮ ಗುರುಪೀಠ ಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಕರ್ಮ ಸಮಾಜದ ಕಲೆ, ಸಂಸ್ಕೃತಿ, ಧಾರ್ಮಿಕ ಅಸ್ತಿತ್ವ ಉಳಿಸಲು ಗುರುಪೀಠದ ಅವಶ್ಯಕತೆ ಇದೆ. ಸಮಾಜವು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಮಠಾಧೀಶರ ಮಾರ್ಗದರ್ಶನ ಮುಖ್ಯವಾಗಿದೆ ಎಂದರು.

ಜಿಲ್ಲೆಯಲ್ಲಿ ಸ್ಥಾಪನೆಯಾಗುವ ವಿಶ್ವಕರ್ಮ ಗುರುಪೀಠ ಇಡೀ ವಿಶ್ವಕರ್ಮ ಸಮಾಜವನ್ನ ಪ್ರತಿನಿಧಿಸುವ ಪೀಠವಾಗಿದೆ. ಭವಿಷ್ಯದ ದಿನಮಾನಗಳಲ್ಲಿ ಸಮಾಜಕ್ಕೆ ಭದ್ರ ಬುನಾದಿ ಬೇಕಾಗಿದ್ದು, ಅಭಿವೃದ್ಧಿಪರ ಆಲೋಚನೆ ಹೊಂದಿ ಗುರುಪೀಠ ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಹುಬ್ಬಳಿಯ ವಿಶ್ವಕರ್ಮ ಸಮಾಜದ ಅಧ್ಯಕ್ಷ ಸಿ.ಪಿ ಮಾಯಾಚಾರ್ ಮಾತನಾಡಿ, ಬದಲಾದ ಕಾಲಘಟ್ಟದಲ್ಲಿ ವಿಶ್ವಕರ್ಮ ಸಮಾಜದ ಅಸ್ಮಿತೆಯಾದ ಪಂಚವೃತ್ತಿ, ಶಿಲ್ಪಕಲೆ ಉಳಿಸಿ ಬೆಳೆಸಲು ಶ್ರಮಿಸಬೇಕು. ಸಮಾಜದಲ್ಲಿ ಏಕತೆಯ ಕೊರತೆ ಯಿದ್ದು, ಸೂಕ್ತ ಮಾರ್ಗದರ್ಶನಕ್ಕಾಗಿ ಪೀಠ ಸ್ಥಾಪಿಸಿರುವುದು ಸಂತೋಷದ ವಿಷಯವಾಗಿದೆ ಎಂದರು.

ಜಿಲ್ಲಾ ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಬಿ.ವಿ ಶಿವಾನಂದ ಮಾತನಾಡಿ, ಸಮಾಜದ ಓರೆಕೋರೆ ತಿದ್ದಲು ಗುರುವಿನ ಮಾರ್ಗದರ್ಶನದ ಅವಶ್ಯಕತೆಯಿದೆ. ವಿಶ್ವಕರ್ಮರ ಸಂಸ್ಕೃತಿ, ಪರಂಪರೆ, ವೃತ್ತಿಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ನಾಗೇಂದ್ರಚಾರ್ ಬಸಾಪುರ ಅಧ್ಯಕ್ಷತೆ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಗೌರವಾಧ್ಯಕ್ಷ ಬಿ.ಎಲ್ ಸಿದ್ದರಾಮಚಾರ್, ನಿರ್ದೇಶಕ ಬಿ.ಪಿ ಜಗನ್ನಾಥ್, ಹೊನ್ನಾಳಿ ಅಧ್ಯಕ್ಷ ಶಾಂತಚಾರ್, ಜಗಳೂರು ಅಧ್ಯಕ್ಷ ಗುರುಸಿದ್ದ ಚಾರ್, ನಿವೃತ್ತ ಪ್ರಾಧ್ಯಪಕ ಸೀತಾರಾಮ ಚಾರಿ ಸೇರಿದಂತೆ ವಿಶ್ವಕರ್ಮ ಸಮಾಜದ ಮುಖಂಡರು, ಮಹಿಳೆಯರು ಭಾಗವಹಿಸಿದ್ದರು.

## ಇಂದು ಇಸ್ಕಾನ್‌ನಿಂದ ಬಹುಮಾನ ವಿತರಣೆ

ದಾವಣಗೆರೆ, ಮಾ. 1 - ಅಂತರರಾಷ್ಟ್ರೀಯ ಕೃಷ್ಣ ಭಾವನಾಮೃತ ಸಂಘ (ಇಸ್ಕಾನ್) ಜಿಲ್ಲೆಯ ಶಾಲಾ ಮಕ್ಕಳಿಗಾಗಿ ಏರ್ಪಡಿಸಿದ್ದ 'ಭಗವದ್ಗೀತೆ ಆಧರಿತ ಮೌಲ್ಯಯುತ ಶಿಕ್ಷಣ' ಕುರಿತ ಪರೀಕ್ಷಾ ಸ್ಪರ್ಧೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮಾ.2ರ ಗುರುವಾರದಂದು ಬಹುಮಾನ ವಿತರಣೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಇಸ್ಕಾನ್ ಮುಖ್ಯಸ್ಥ ಅವಧೂತ ಚಂದ್ರ ದಾಸ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 8.40ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ. ಎಚ್. ಶಿವಯೋಗಿಸ್ವಾಮಿ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ಜಯಣ್ಣ, ಪುಣೆಯ ಇಸ್ಕಾನ್ ದೇವಸ್ಥಾನದ ಮುಖ್ಯಸ್ಥ ಭಗವತ್ ಸೇವಾ ಪ್ರಭು ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯ ಬೆಳೆಸಬೇಕು, ಸಮಾಜಘಾತುಕ ಚಟುವಟಿಕೆಗಳಿಂದ ದೂರ ಇರುವಂತೆ ಮಾಡಬೇಕೆಂಬ ಸದುದ್ದೇಶದಿಂದ ಸಂಸ್ಥೆಯು ಜಿಲ್ಲೆಯ ಶಾಲಾ ಮಕ್ಕಳಿಗೆ 5ರಿಂದ 7 ತರಗತಿಯ ವರೆಗೆ ಮೊದಲ ವಿಭಾಗದಲ್ಲಿ ಮತ್ತು 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ 2ನೇ ವಿಭಾಗದಲ್ಲಿ ಏರ್ಪಡಿಸಿದ್ದ ಪರೀಕ್ಷೆಯಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಇವರ ಪೈಕಿ ಅಮೃತ ವಿದ್ಯಾಲಯದ 7ನೇ ತರಗತಿ ವಿದ್ಯಾರ್ಥಿನಿ ಅದಿತಿ ರಾವ್ ಪುತ್ಲಿ ಟಾಪರ್ ಆಗಿದ್ದಾರೆ. ಮೊದಲ ವಿಭಾಗದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 9ನೇ ತರಗತಿಯ ಪಿ.ಎಂ. ಆದ್ಯಾ ಪ್ರಥಮ ಮತ್ತು 2ನೇ ವಿಭಾಗದಲ್ಲಿ ಹರಿಹರದ ಎಂಕೆಇಟಿ ಶಾಲೆಯ 9ನೇ ತರಗತಿಯ ಸ್ವರೂಪ್ ದುರ್ಗೋಜಿ ಪ್ರಥಮ ಸ್ಥಾನ ಪಡೆದಿದ್ದಾರೆ. 35 ಮಕ್ಕಳಿಗೆ ಸಮಾಧಾನಕರ ಬಹುಮಾನ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಭಗವತ್ ಸೇವಾ ಪ್ರಭು ಇದ್ದರು.

# ಯೋಧ ಚನ್ನಬಸು ತುಕ್ಕನ್ನವರ್ ಅವರಿಗೆ ಸ್ವಾಗತ



ದಾವಣಗೆರೆ, ಮಾ.1- ಭಾರತೀಯ ಸೇನೆಯಲ್ಲಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ಬುಧವಾರ ನಗರಕ್ಕೆ ಆಗಮಿಸಿದ ಯೋಧ ಚನ್ನಬಸು ತುಕ್ಕನ್ನವರ್ ಅವರನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಶಿವಾಪುರ ಗ್ರಾಮ ಮೂಲದ ಲಕ್ಷ್ಮಣ ತುಕ್ಕನ್ನವರ್-ಗಂಗವ್ವ ದಂಪತಿ ಪುತ್ರರಾದ ಚನ್ನಬಸು ತುಕ್ಕನ್ನವರ್ ಹಾಲಿ ದಾವಣಗೆರೆಯಲ್ಲಿ ವಾಸಿಸುತ್ತಿದ್ದಾರೆ.

ಚನ್ನಬಸು ಅವರು ಬೆಂಗಳೂರು, ಕಾರ್ಗಿಲ್, ರಾಜಸ್ಥಾನ, ಮಣಿಪುರ, ನಾಗಾಲ್ಯಾಂಡ್, ಸಿಕಂದರಾಬಾದ್, ಜಮ್ಮು-ಕಾಶ್ಮೀರ, ಉತ್ತರಪ್ರದೇಶ, ನವದೆಹಲಿ, ಚಂಡೀಗಢ, ಉತ್ತರಾಖಂಡ ಸೇರಿ ವಿವಿಧೆಡೆ ಭಾರತೀಯ ಸೇನೆ (9 ಇಂಜಿನಿಯರ್ ರೆಜಿಮೆಂಟ್)ಯಲ್ಲಿ ಕರ್ತವ್ಯ ನಿರ್ವಹಿಸಿ ಸ್ವಯಂ ನಿವೃತ್ತಿ ಹೊಂದಿದ್ದಾರೆ.

ಸ್ಥಳೀಯ ರೈಲು ನಿಲ್ದಾಣದಲ್ಲಿ ಬಂದಿಳಿದ ಅವರನ್ನು ನಾಗರಿಕರು, ಬಿಜೆಪಿ ಮುಖಂಡರು, ಕುಟುಂಬ ಸದಸ್ಯರು ಅವರನ್ನು ಶಾಲು ಹೊದಿಸಿ, ಹೂಗುಚ್ಛ ನೀಡಿ, ಸಿಹಿ ತಿನ್ನಿಸಿ ಬರಮಾಡಿಕೊಂಡರು. ನಿಲ್ದಾಣ ಆವರಣದಿಂದ ತೆರೆದ ಜೀಪಿನಲ್ಲಿ ಮೆರವಣಿಗೆ ನಡೆಸಲಾಯಿತು. ಭಾರತ್ ಮಾತ ಕೀ ಜೈ ಹಾಗೂ ವೀರಯೋಧರಿಗೆ ಜಯವಾಗಲಿ ಎಂಬ ಘೋಷಣೆಗಳು ಮೊಳಗಿದವು.

ಪತ್ನಿ ಪುಷ್ಪಾ, ಆಶಾ, ಮುರುಗೇಶ್, ರೂಪಾ, ಧನಂಜಯ್, ರಾಜಶೇಖರಪ್ಪ, ರತ್ನಮ್ಮ, ದಾಕ್ಷಾಯಿಣಿ, ಲಕ್ಕವ್ವ, ಗೌರಮ್ಮ ಮಂಜುನಾಥ, ಎಚ್.ಕೆ. ವೀರೇಶ್, ಕೆ.ಬಿ. ನಾಗರಾಜು, ಮಾಜಿ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಎ.ಎಸ್. ಮೃತ್ಯುಂಜಯ, ಟಿಂಕರ್ ಮಂಜಣ್ಣ, ಶಿವನಗೌಡ ಪಾಟೀಲ್, ಎಚ್.ಎನ್. ಜಗದೀಶ್, ಬಾಲರಾಜ ಶ್ರೇಷ್ಠಿ, ರೇಣುಕಮೂರ್ತಿ, ಮಂಜುಳಾ ಮಹೇಶ್, ಎ.ಸಿ.ರಾಘವೇಂದ್ರ, ಬಿ.ಎಸ್. ರಾಘವೇಂದ್ರಶೆಟ್ಟಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸತ್ಯಪ್ರಕಾಶ್, ಅಂದಪ್ಪ, ವಾಗೀಶ್, ಮಂಜುನಾಥ್ ಇತರರಿದ್ದರು.

ನಂತರ ಪಾಲಿಕೆಯ 31ನೇ ವಾರ್ಡ್‌ನ ರಾಮನಗರದಲ್ಲಿ ನೂತನ ಉದ್ಯಾನ ನಿರ್ಮಾಣಕ್ಕೆ ಯೋಧ ಚನ್ನಬಸು ಭೂಮಿಪೂಜೆ ನೆರವೇರಿಸಿದರು. ಕಾಂಗ್ರೆಸ್‌ನ ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಮುಖಂಡ ಕೆ. ಜಿ.ಶಿವಕುಮಾರ್ ಇತರರಿದ್ದರು.

# ಎನ್‌ಪಿಎಸ್ ರದ್ದುಪಡಿಸಿ, ಒಪಿಎಸ್ ಜಾರಿಗೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಮಾ.1- ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗೆ ಅನುಸರಿಸುತ್ತಿರುವ ಹೊಸ ಪಿಂಚಣಿ ನೀತಿಯನ್ನು ರದ್ದುಪಡಿಸಿ, ಹಳೆಯ ಪಿಂಚಣಿ ನೀತಿಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ದಾವಣಗೆರೆ ವಿಶ್ವವಿದ್ಯಾನಿಲಯ ಶಿಕ್ಷಕರ ಸಂಘದ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು. ವಿಶ್ವವಿದ್ಯಾನಿಲಯದ ಮುಖ್ಯದ್ವಾರದ ಮುಂಭಾಗದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿದ ಶಿಕ್ಷಕರು, ಎನ್‌ಪಿಎಸ್ ರದ್ದುಪಡಿಸಿ ಒಪಿಎಸ್ ಜಾರಿಗೊಳಿಸುವಂತೆ ಆಗ್ರಹಿಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಡಾ.ಎಚ್.ವಿಶ್ವನಾಥ, ಪ್ರಧಾನ ಕಾರ್ಯದರ್ಶಿ ಪ್ರೊ.ಗೋಪಿನಾಥ, ಪ್ರೊ. ರವಿಕುಮಾರ ಪಾಟೀಲ, ಡಾ.ಬಸನಗೌಡ ಬೆನಕನಹಳ್ಳಿ, ಡಾ.ತಿಪ್ಪೇಶ್, ಡಾ.ದಾನೇಶ, ಡಾ.ಶಿವಲಿಂಗಪ್ಪ ಮತ್ತಿತರರು ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿ ಶಿವಾಜಿ ಜಯಂತಿ

ರಾಣೇಬೆನ್ನೂರು, ಮಾ.1- ಛತ್ರಪತಿ ಶಿವಾಜಿ ಮಹಾರಾಜರ 396 ಜಯಂತಿ ಮಹೋತ್ಸವ, ತಾಲ್ಲೂಕು ಕ್ಷತ್ರಿಯ ಮರಾಠ ಸಮಾಜದ ಸಮಾವೇಶ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಶಾಸಕ ಅರುಣಕುಮಾರ ಪೂಜಾರ್ ಉದ್ಘಾಟಿಸಿದರು.

ಇಲ್ಲಿನ ಕಾಕಿ ಜನಸೇವಾ ಸಭಾಭವನದಲ್ಲಿ ನಡೆದ ಸಮಾರಂಭದ ಸಾನ್ನಿಧ್ಯವನ್ನು ವಿವೇಕಾನಂದಾಶ್ರಮದ ಪ್ರಕಾಶಾನಂದ ಮಹಾರಾಜರು, ಸಂತ ಸೇವಾಲಾಲ್ ಸ್ವಾಮೀಜಿ ಹಾಗೂ ಗುರುವೆಂಕಪ್ಪಯ್ಯ ಸ್ವಾಮಿಗಳು ವಹಿಸಿದ್ದರು. ಸಾರಿಗೆ ಸಂಸ್ಥೆ ಅಧ್ಯಕ್ಷ ಡಾ. ಬಸವರಾಜ ಕೇಲಗಾರ, ಶಾಸಕ ಆರ್. ಶಂಕರ್, ಎಪಿಎಂಸಿ ಮಾಜಿ ನಿರ್ದೇಶಕ ಬಸವರಾಜ ಹುಲ್ಲತ್ತಿ ಮತ್ತಿತರಿದ್ದರು.



## ಹರಳಹಳ್ಳಿ : ಬಸವೇಶ್ವರ ದೇವರ ಉಚ್ಛಾಯ



ಮಲೇಬೆನ್ನೂರು, ಮಾ. 1- ಹರಳಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವರ ಉಚ್ಛಾಯ ಮಂಗಳವಾರ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮತ್ತಿತರರು ಪಾಲ್ಗೊಂಡಿದ್ದರು.

## ನಸೀರ್ ಅಹ್ಮದ್ ಅವರಿಗೆ ಪ್ರಶಸ್ತಿ




ದಾವಣಗೆರೆ, ಮಾ.1- ಸಿ.ಆರ್. ನಸೀರ್ ಅಹಮದ್ ಅವರಿಗೆ ಕರ್ನಾಟಕ ಉರ್ದು ಚಿಲ್ಡ್ರನ್ಸ್ ಅಕಾಡೆಮಿ (ಶಿಕಾರಿಪುರ) ವತಿಯಿಂದ 2022-23 ಮೌಲಾನಾ ಆಜಾದ್ ಪ್ರಶಸ್ತಿಯನ್ನು ಶಿಕಾರಿಪುರದಲ್ಲಿ ಇತ್ತೀಚಿಗೆ ನಡೆದ ಭಾರತ ಸಮ್ಮೇಳನದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ॥ ವೀರಭದ್ರಪ್ಪ ಅವರು ಪ್ರದಾನ ಮಾಡಿದರು. ಲೋಕಸಭಾ ಸದಸ್ಯರಾದ ಬಿ.ಎಸ್. ರಾಘವೇಂದ್ರ, ಶಿಕಾರಿಪುರದ ಮುರಘಾ ಶಾಖಾ ಮಠದ ಸ್ವಾಮೀಜಿ, ಫಾದರ್ ಡಿಸೋಜಾ ಮತ್ತು ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕಾಡಮಿಯ ಅಧ್ಯಕ್ಷ ಡಾ. ಹಫೀಜ್ ಕರ್ನಾಟಕಿಯವರು ವಹಿಸಿದ್ದರು.

## ಕೊಂಡಜ್ಜಿಯಲ್ಲಿ ಇಂದು - ನಾಳೆ ನೂತನ ದೇವಸ್ಥಾನದ ಉದ್ಘಾಟನೆ

ಶ್ರೀ ಆಂಜನೇಯ ಸ್ವಾಮಿ ನೂತನ ದೇವಸ್ಥಾನ ಉದ್ಘಾಟನೆ, ಕಳಸಾರೋಹಣ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಶ್ರೀ ಗಂಗಾಪರಮೇಶ್ವರಿ ದೇವಿ ನೂತನ ದೇವಸ್ಥಾನ ಉದ್ಘಾಟನೆ, ಕಳಸಾರೋಹಣ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭವು ಇಂದು ಮತ್ತು ನಾಳೆ ನಡೆಯಲಿದೆ. ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ದೇವರ ಪ್ರತಿಷ್ಠೆ ಜೀವ ಕುಂಬಾಭಿಷೇಕ ನಡೆಯುವವು. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬನವಾಸಿ ನಾಗೇಶ್ ಭಟ್ ಅವರ ಪೌರೋಹಿತ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ.

ನಾಳೆ ಶುಕ್ರವಾರ ಕಳಸಾರೋಹಣ ನಡೆಯುವುದು. ಬೆಳಿಗ್ಗೆ 11 ಗಂಟೆಗೆ ಏರ್ಪಾಡಾಗಿರುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಸಿರಿಗೆರೆಯ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ನರಸೀಪುರದ ಅಂಬಿಗರ ಚೌಡಯ್ಯನವರ ಗುರುಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಹಿರಿಯೂರಿನ ಕೋಡಿಹಳ್ಳಿ ಮಠದ ಶ್ರೀ ಷಡಾಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು.

## ಬೇಡಿಕೆ ಈಡೇರಿಸದಿದ್ದರೆ ಮತ್ತೆ ನೌಕರರ ಹೋರಾಟ : ಪಾಲಾಕ್ಷಿ

ದಾವಣಗೆರೆ, ಮಾ. 1 – ರಾಜ್ಯ ಸರ್ಕಾರ ಶೇ.17ರ ಮಧ್ಯಂತರ ಪರಿಹಾರ ಭತ್ಯೆ ಹಾಗೂ ಹಳೆಯ ಪಿಂಚಣಿ ಯೋಜನೆ ಅಧ್ಯಯನಕ್ಕೆ ಸಮಿತಿ ರಚನೆಯ ನಿರ್ಧಾರ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರ ಮುಷ್ಕರವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಪಾಲಾಕ್ಷಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರಿ ನೌಕರರು ನಡೆಸಿದ ಹೋರಾಟಕ್ಕೆ ಪೂರ್ಣ ಸ್ಪಂದನೆ ಸಿಕ್ಕಿಲ್ಲ. ಆದರೂ, ರಾಜ್ಯ ನಾಯಕರ ನಿರ್ಧಾರದಂತೆ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ ಎಂದರು. ಹಳೆಯ ಪಿಂಚಣಿ ವ್ಯವಸ್ಥೆ ಜಾರಿಯ ಕುರಿತು ಎರಡು ತಿಂಗಳಲ್ಲಿ ವರದಿ ಪಡೆಯುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಈ ಬಗ್ಗೆ ಕಾದು ನೋಡಲಾಗುವುದು ಎಂದರು.

ಸಚಿವಾಲಯ ನೌಕರರ ಸಂಘದ ರಾಜ್ಯಾಧ್ಯಕ್ಷ ಗುರುಸ್ವಾಮಿ ಅವರು ಮುಷ್ಕರ ನಿಲ್ಲಿಸುವ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಶೇ.25ರ ಮಧ್ಯಂತರ ಪರಿಹಾರ ಬೇಕು ಎಂಬುದು ಜಿಲ್ಲಾಧ್ಯಕ್ಷರ ಅಭಿಮತ ಆಗಿತ್ತು. ಆದರೂ, ಪ್ರಸ್ತುತ ಕಾಲ ಘಟ್ಟವನ್ನು ಪರಿಗಣಿಸಿ ರಾಜ್ಯಾಧ್ಯಕ್ಷರ ತೀರ್ಮಾನಕ್ಕೆ ನಾವು ಒಪ್ಪಿದ್ದೇವೆ. ಈ ಬಗ್ಗೆ ಗುರುಸ್ವಾಮಿ ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಹೊಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಮುಖಂಡರಾದ ಗುರುಮೂರ್ತಿ, ತಿಪ್ಪೇಸ್ವಾಮಿ, ಡಾ. ಉಮೇಶ್, ಪರಶುರಾಮಪ್ಪ, ರಾಮಪ್ಪ, ಹಾಲಪ್ಪ, ಮುಬಾರಕ್ ಅಲಿ, ಜಗದೀಶ್, ಶ್ರೀನಿವಾಸ್, ಗೋವಿಂದ ರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಮಾಯಕೊಂಡದಲ್ಲಿ ಭೋವಿ ಸಮಾಜದವರಿಗೆ ಟಿಕೆಟ್‌ಗೆ ಆಗ್ರಹ

ದಾವಣಗೆರೆ, ಮಾ. 1 - ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ 18 ಸಾವಿರಕ್ಕೂ ಹೆಚ್ಚು ಭೋವಿ ಸಮಾಜದ ಮತದಾರರಿದ್ದಾರೆ. ಸಾಮಾಜಿಕ ನ್ಯಾಯ ಕಲ್ಪಿಸಲು ಸಮಾಜದವರಿಗೆ ಟಿಕೆಟ್ ನೀಡಬೇಕು ಎಂದು ಕಾಂಗ್ರೆಸ್ ಹಾಗೂ ಬಿಜೆಪಿಗಳಿಗೆ ದಾವಣಗೆರೆ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಹೆಚ್. ಜಯಣ್ಣ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ಷೇತ್ರದಿಂದ ಹಿಂದಿನ ಬಾರಿ ಬೇರೆ ಸಮುದಾಯಗಳಿಗೆ ಟಿಕೆಟ್ ಕೊಡಲಾಗಿದೆ. ಈ ಬಾರಿ ಭೋವಿ ಸಮಾಜದವರಿಗೆ ಟಿಕೆಟ್ ನೀಡಬೇಕು. ಟಿಕೆಟ್ ಕೊಡದೇ ಇದ್ದರೆ ಮುಂದಿನ ಹೆಜ್ಜೆಯ ಬಗ್ಗೆ ಸಮಾಜ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು.

ಕಾಂಗ್ರೆಸ್‌ನಿಂದ ಆನಂದಪ್ಪ, ಡಿ. ಬಸವರಾಜ ಹಾಗೂ ವೈ. ರಾಮಪ್ಪ ಮತ್ತು ಬಿಜೆಪಿಯಿಂದ ಜಿ.ಎಸ್. ಶ್ಯಾಮ್ ಆಕಾಂಕ್ಷಿಗಳಾಗಿದ್ದಾರೆ ಎಂದೂ ಅವರು ಹೇಳಿದರು. ಭೋವಿ ಸಮಾಜದವರ ಮತಗಳ ಸಂಖ್ಯೆ ಬಗ್ಗೆ ತಪ್ಪು ಕಲ್ಪನೆ ಮೂಡಿಸಲಾಗಿದೆ. ಜಿಲ್ಲೆಯಲ್ಲಿ ನಿರ್ಣಾಯಕ ಸಂಖ್ಯೆಯ ಭೋವಿ ಮತದಾರರಿದ್ದಾರೆ ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ವಿ. ಗೋಪಾಲ್, ಬಿ.ಸಿ. ಮಂಜಪ್ಪ, ಎ.ಬಿ. ನಾಗರಾಜ್, ವಿಜಯ್ ಕುಮಾರ್, ವೀರಭದ್ರಪ್ಪ, ಭೀಮೇಶ್, ಎಸ್.ಬಿ. ಹನುಮಂತಪ್ಪ, ಎಸ್.ಹೆಚ್. ಮಂಜುನಾಥ್ ಮತ್ತಿತರರಿದ್ದರು.

# ಮುಕ್ತ ಮತದಾನ, ಸಮರ್ಥ ಸರ್ಕಾರ ಅಧಿಕಾರಕ್ಕೆ ಬರುವುದು ಇಂದಿನ ಅಗತ್ಯ



### ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಅಭಿಮತ

ದಾವಣಗೆರೆ, ಮಾ. 1- ಜನಸಾಮಾನ್ಯರನ್ನು ಕಾಡುತ್ತಿರುವ ನೈಜ ಸಮಸ್ಯೆಗಳ ಬಗ್ಗೆ ಗಮನಹರಿದು, ಮುಕ್ತ ಮತದಾನ ನಡೆದು, ಸಮರ್ಥ ಮತ್ತು ಪರ್ಯಾಯ ಸರ್ಕಾರ ಅಧಿಕಾರಕ್ಕೆ ಬರುವುದು ಇಂದಿನ ಅಗತ್ಯವಾಗಿದೆ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಅಭಿಪ್ರಾಯಪಟ್ಟರು.

ನಗರದ ಪ್ರವಾಸಿ ಮಂದಿರದಲ್ಲಿ 'ಮುಕ್ತ ಮತದಾನ, ಸಮರ್ಥ ಸರ್ಕಾರ' ಸ್ವತಂತ್ರ ಅಧ್ಯಯನ ವರದಿಗೆ ಪೂರಕವಾದ ಒಂದು ಕಾಳಜಿಯ ಕರೆ ಹಾಗೂ ಜನತಂತ್ರದ ನೈಜ ಹಕ್ಕುದಾರ ಧ್ವನಿ ಹಿಡಿದಿಡುವ 'ಡಯಾಗ್ನೋಸ್ಟಿಕ್' ವರದಿ ಬಿಡುಗಡೆ ಮಾಡಿ ಮಾತನಾಡಿದರು.

ಪ್ರಮುಖ ಪಕ್ಷಗಳ ಮೇಲೆ ಭರವಸೆ ದೂರವಾದಲ್ಲಿ ಸಮರ್ಥ ಪರ್ಯಾಯವೊಂದನ್ನು ಮುಂದಿಟ್ಟರೆ ಸಕಾರಾತ್ಮಕ ದೃಷ್ಟಿ ಹರಿಸುವ ಸಾಧ್ಯತೆ ಇದೆ. ಆದರೆ, ಈ ಹೊಸ ರಾಜಕೀಯ ಪ್ರಯೋಗಗಳು ಒಡೆದಾಳುವ ತಂತ್ರಗಾರಿಕೆಗೆ ಬಲಿಯಾಗಿ ಚುನಾವಣಾ ಜನತಂತ್ರವನ್ನು ಮತ್ತಷ್ಟು ದುರ್ಬಲಗೊಳಿಸುವ ಬಗ್ಗೆ ಎಚ್ಚರಿಕೆ ಅತ್ಯಗತ್ಯ ಎಂದು ಹೇಳಿದರು.

ಅಹಂಕಾರದ ಅಮಲಿನಲ್ಲಿರುವ ಬಿಜೆಪಿ, ಭ್ರಮೆಯಲ್ಲಿರುವ ಆರೆಸ್ಸೆಸ್ ಗೆ ಜಾತ್ಯತೀತತೆ, ಸಮಾಜವಾದದ ಬಗ್ಗೆ ನಂಬಿಕೆ ಇಲ್ಲವಾಗಿದ್ದು, ಪರ್ಯಾಯ ಮತ್ತು ಸಮರ್ಥ ರಾಜಕೀಯ ದೇಶ ಮತ್ತು ರಾಜ್ಯಕ್ಕೆ ಅವಶ್ಯವಾಗಿದೆ ಎಂದರು.

ಮುಕ್ತ ಮತದಾನ ಮತ್ತು ಸಮರ್ಥ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಮತದಾರರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಇದಕ್ಕೆ ಎಡಪಕ್ಷಗಳು, ಪ್ರಗತಿಪರ ಸಂಘಟನೆಗಳು, ರೈತ, ಕಾರ್ಮಿಕ, ದಲಿತ ಚಳವಳಿಗಳ ಮುಖಂಡರು, ಕಾರ್ಯಕರ್ತರು ಕೈಜೋಡಿಸಬೇಕಾಗಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಹೊರತುಪಡಿಸಿ ಬೇರೆ ಯಾವ ಪಕ್ಷಗಳು ಸಹ ಸುಭದ್ರ ಸರ್ಕಾರ ನೀಡಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷಕ್ಕೂ ಬುದ್ದಿವಾದ ಹೇಳಬೇಕಾದ ಅನಿವಾರ್ಯತೆ ಇದೆ. ಜನತಂತ್ರವನ್ನು ಬೆಳೆಸಬೇಕೆಂದರು.

'ಮತ' ಪ್ರೀತಿಯಿಂದ ಸಾಕಿದ ಹೆಣ್ಣುಮಗಳಿದ್ದಂತೆ. ಅದು ಮಾರಾಟದ ವಸ್ತುವಲ್ಲ. ಭ್ರಷ್ಟರಹಿತ ಆಡಳಿತದ ಬಗ್ಗೆ ಹೆಚ್ಚಿನ ಭರವಸೆ ಇದೆ. ತಕ್ಷಣವೇ ಚುನಾವಣೆ ನಡೆಸಿದರೆ ಯಾವ ಪಕ್ಷಗಳೂ ಅಧಿಕಾರಕ್ಕೆ ಬರಲು ಕಷ್ಟ. ಅತಂತ್ರ, ನಿಗೂಢತೆ ಮತದಾರರ ಮನಸ್ಸನ್ನು ಕಾಡುತ್ತಿದೆ ಎಂದರು.

ಆರ್ಥಿಕ ತಜ್ಞ ಜಿ.ವಿ. ಸುಂದರ್ ಮಾತನಾಡಿ, ಬಿಜೆಪಿ ಸರ್ಕಾರ ಗ್ರಾಮೀಣ, ರೈತರ, ಬಡವರ, ಶೋಷಿತರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಕೇಂದ್ರ ಬಜೆಟ್‌ನಲ್ಲಿ ಸಹ ಜನಪರ ಯೋಜನೆಗಳ ಅನುದಾನವನ್ನು ಕಡಿತಗೊಳಿಸಲಾಗಿದೆ. ರಸ್ತೆ ನಿರ್ಮಾಣ, ವಿಮಾನ ನಿಲ್ದಾಣಗಳು ಸೇರಿದಂತೆ ಪ್ರಾಜೆಕ್ಟ್‌ಗಳ ಬಗ್ಗೆ ಹೆಚ್ಚು ಒತ್ತನ್ನು ನೀಡಲಾಗಿದೆ ಎಂದು ಹೇಳಿದರು.

ಮುಂಬರುವ ಚುನಾವಣೆಗಳಲ್ಲಿ ಜನರ 'ನೈಜ ಸಮಸ್ಯೆಗಳು' ಮುನ್ನೆಲೆಗೆ ಬರಬೇಕಾಗಿದೆ. ಮುಕ್ತ ಮತದಾನ ನಡೆದು ಸಮರ್ಥ ಸರ್ಕಾರ ಅಧಿಕಾರಕ್ಕೆ ಬರಬೇಕಾಗಿದ್ದು, ಈ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ರೈತ ಮುಖಂಡ ತೇಜಸ್ವಿ ಪಟೇಲ್ ಮಾತನಾಡಿ, ಅಧಿಕಾರಿಗಳು, ರಾಜಕೀಯ ಪಕ್ಷಗಳು ಚುನಾವಣೆ ಬಗ್ಗೆಯೇ ಚರ್ಚೆಗಳನ್ನು ನಡೆಸುತ್ತಿದ್ದು, ಮತ್ತೊಂದು ಕಡೆ ಜನಪರ ಸರ್ಕಾರ ಅಧಿಕಾರಕ್ಕೆ ಬರಲೆಂದು ಚಿಂತನೆ ಸಹ ನಡೆಯುತ್ತಿದೆ. ಸಮರ್ಥ ರಾಜಕೀಯ ಪಕ್ಷ ಅಧಿಕಾರಕ್ಕೆ ಬರಲು ಮತದಾರರಲ್ಲಿ ಅರಿವು ಅವಶ್ಯ ಎಂದು ತಿಳಿಸಿದರು.

ಕೇವಲ ಯೋಗ್ಯ ಸರ್ಕಾರ ಅಧಿಕಾರಕ್ಕೆ ಬಂದರೆ ಸಾಲದು, ಯೋಗ್ಯ ಪ್ರಕ್ರಿಯೆಗಳು ಆಗಬೇಕಾಗಿದೆ. ಮಾರುಕಟ್ಟೆ ಭಾಷೆಯಿಂದ ಮಾನವೀಯ ಭಾಷೆಗೆ ಸಮಾಜವನ್ನು ಕೊಂಡೊಯ್ಯಬೇಕಾಗಿದೆ ಎಂದರು.

ಸಭೆಯಲ್ಲಿ ವಕೀಲರಾದ ಅನಿಸ್ ಪಾಷಾ, ರೈತ ಮುಖಂಡರಾದ ಚಿನ್ನಸಮುದ್ರ ಶೇಖರನಾಯ್ಕ, ಉಮೇಶನಾಯ್ಕ, ಪೂಜಾರ ಅಂಜಿನಪ್ಪ, ಕರಿಬಸಪ್ಪ, ಸಿರಿನ್ ಬಾನು ಮತ್ತಿತರರು ಭಾಗವಹಿಸಿದ್ದರು.

## ಜಗಳೂರು : ಸರ್ಕಾರಿ ನೌಕರರ ಪ್ರತಿಭಟನೆ



ಜಗಳೂರು, ಮಾ1- ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗ ಎನ್.ಪಿ.ಎಸ್ ರದ್ದುಪಡಿಸಿ ಓಪಿಎಸ್ ಜಾರಿಗೊಳಿಸಲು ಏಳನೇ ವೇತನ ಜಾರಿಗೆ ಒತ್ತಾಯಿಸಿ ಬೆಂಗಳೂರಿನಲ್ಲಿ ನಡೆಯುವ ಅನಿರ್ದಿಷ್ಟಾವಧಿ ಧರಣಿಗೆ ತಾಲ್ಲೂಕು ನೌಕರರ ಸಂಘದಿಂದ ಬೆಂಬಲಿಸಿದರು.

ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಚಂದ್ರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಅಂಜಿನಪ್ಪ, ತಿಪ್ಪೇಸ್ವಾಮಿ, ವೀರೇಶ್, ಬಸವರಾಜ್, ಹನುಮಂತೇಶ್, ವಾಸುದೇವ್, ಬೀರೇಂದ್ರಕುಮಾರ್, ನಾಗರಾಜ್, ಎ.ಪಾಲಯ್ಯ ಮತ್ತಿತರರು ಇದ್ದರು.

## ಕಾಣೆಯಾಗಿದ್ದಾರೆ



**ವೈ.ವಿ. ಹನುಮಂತಪ್ಪ** S/o ಎನ್. ವೀರಪ್ಪ **ಯಾದ್ಲರ್** (48 ವರ್ಷ) ಭಾವಚಿತ್ರದಲ್ಲಿರುವ ಈ ವ್ಯಕ್ತಿ ದಿ. 04.09.1997 ರಂದು ಮಧ್ಯಾಹ್ನ 2 ಗಂಟೆಗೆ ಹರಿಹರ ತಾಲ್ಲೂಕು ಷಂಶೀಪುರ ಗ್ರಾಮದ ತಮ್ಮ ನಿವಾಸದಿಂದ ಹೋದವರು ಹಿಂತಿರುಗಿರುವುದಿಲ್ಲ. 5.7 ಅಡಿ ಎತ್ತರ, ಗೋಧಿ ಮೈ ಬಣ್ಣ, ಸಾಧಾರಣ ಮೈಕಟ್ಟು, ದುಂಡು ಮುಖ, ಬಿಳಿ ಶರ್ಟ್, ನೀಲಿ ಬಣ್ಣದ ಲುಂಗಿ ಧರಿಸಿರುತ್ತಾರೆ. ಇವರ ಸುಳಿವು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಗಾಗಲಿ ಅಥವಾ ಮೇಲಿನ ವಿಳಾಸಕ್ಕಾಗಲಿ ಅಥವಾ **96117 09012** ಈ ಸಂಖ್ಯೆಗೆ ತಿಳಿಸಲು ಕೋರಿದೆ.

# ಬಾಪೂಜಿ ಬ್ಯಾಂಕ್‌ನಿಂದ ಅಥಣಿ ವೀರಣ್ಣ ಅವರಿಗೆ ಅಭಿನಂದನೆ



ದಾವಣಗೆರೆ, ಮಾ.1- ದಾವಣಗೆರೆ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾದ ಬಾಪೂಜಿ ಬ್ಯಾಂಕಿನ ಹಿರಿಯ ನಿರ್ದೇಶಕರೂ, ಹೆಸರಾಂತ ಲೆಕ್ಕ ಪರಿಶೋಧಕರೂ ಆದ ಎ.ಎಸ್.ವೀರಣ್ಣ ಅವರನ್ನು ಬಾಪೂಜಿ ಬ್ಯಾಂಕ್ ವತಿಯಿಂದ ಅಭಿನಂದಿಸಿ ಸನ್ಮಾನಿಸಲಾಯಿತು.

ಬ್ಯಾಂಕಿನ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷರೂ ಆಗಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ನಿರ್ದೇಶಕರುಗಳಾದ ಡಾ. ಎಂ. ಜಿ. ಈಶ್ವರಪ್ಪ, ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ, ಡಾ. ಎ. ಅರುಣ್ ಕುಮಾರ್, ಕೆ.ಎಸ್. ವೀರೇಶ್, ಡಾ. ಎಂ.ಎಂ.ಲಿಂಗ ರಾಜ್, ಡಾ. ಸಿ.ವೈ. ಸುದರ್ಶನ್, ಡಾ. ಕೆ.ಹನುಮಂತಪ್ಪ, ಡಾ.ಶಿವಪ್ಪ, ಡಾ.ಬೊಮ್ಮಣ್ಣ, ಡಾ. ಬಿ. ಪೂರ್ಣಿಮಾ, ಪ್ರಧಾನ ವ್ಯವಸ್ಥಾಪಕ ಎಂ.ಬಸವರಾಜ್, ಸಲಹೆಗಾರರಾದ ಡಿ.ವಿ.ರವೀಂದ್ರ, ಎಸ್.ಕಲ್ಲಪ್ಪ, ಜಿ. ವಿ.ಶಿವಶಂಕರ್, ಹೆಚ್.ಜಿ.ಜಗದೀಶ್, ಡಿ.ಎಸ್.ರಮೇಶ್, ಎಸ್ ಗುರುಮೂರ್ತಿ, ಶಿವಕುಮಾರಯ್ಯ, ಕೆ.ಎನ್.ನವೀನ್, ಹೆಚ್.ಬಿ. ಮಂಜುನಾಥ ಮತ್ತಿತರರು ಉಪಸ್ಥಿತರಿದ್ದರು.

## ನಂದಿಗುಡಿಯಲ್ಲಿ ಇಂದು ಶ್ರೀ ಅಡ್ಡಪಲ್ಲಕ್ಕಿ ಉತ್ಸವ, ರಥೋತ್ಸವ

ನಂದಿಗುಡಿ ಗ್ರಾಮದ ಶ್ರೀ ಬಸವೇಶ್ವರರ ದೇವರ ರಥೋತ್ಸವವು ಇಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದೆ. ಇದಕ್ಕೂ ಮುನ್ನ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ. ನಂತರ ವಿವಿಧ ಸೇವಾ ಕಾರ್ಯಕ್ರಮಗಳ ನಂತರ ದೊಡ್ಡಬಂಡಿ ಪ್ರದರ್ಶನ ಇರುತ್ತದೆ. ರಾತ್ರಿ ಓಕುಳಿ ಹಾಗೂ ಕಂಕಣ ವಿಸರ್ಜನೆ ಮಾಡಲಾಗುವುದು. ಶುಕ್ರವಾರ ಬೆಳಿಗ್ಗೆ ಶ್ರೀ ಬಸವೇಶ್ವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ನೆರವೇರಲಿದೆ.



## ಶಾಮನೂರು ರಥೋತ್ಸವದಲ್ಲಿ ಎಸ್ಸೆಸ್ಸೆಂ ದಂಪತಿ


ದಾವಣಗೆರೆ - ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಬುಧವಾರ ರಾತ್ರಿ ವಿಜೃಂಭಣೆಯಿಂದ ಜರುಗಿತು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮತ್ತು ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ದಂಪತಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.


## ಜೈನ ಶ್ರೀ ಸಂಕೇಶ್ವರ ಪಾರ್ಶ್ವ ರಾಜೇಂದ್ರ ದರ್ಶನ ಪಡೆದ ರಾಜ್ಯಪಾಲರು




ದಾವಣಗೆರೆ, ಮಾ. 1- ದಾವಣಗೆರೆ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಗವಹಿಸಲು ನಿನ್ನೆ ನಗರಕ್ಕೆ ಆಗಮಿಸಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಶ್ರೀ ಶಂಕೇಶ್ವರ ಪಾರ್ಶ್ವ ರಾಜೇಂದ್ರ ಸ್ವಾಮಿ ದರ್ಶನ ಪಡೆದರು. ದೇವಸ್ಥಾನದ ಆಡಳಿತ ಮಂಡಳಿ ರಾಜ್ಯಪಾಲರಿಗೆ ಸ್ವಾಗತ ಕೋರಿದರು. ರಾಜ್ಯಪಾಲರು ಅವರು ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಜೈನ ದೇವಾಲಯದ ಆಡಳಿತ ಮಂಡಳಿ ವತಿಯಿಂದ ರಾಜ್ಯಪಾಲರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ದೇವಾಲಯದ ಅಧ್ಯಕ್ಷರಾದ ಪೂನಂ ಚಂದ್ರ ಜಿ, ಕಾರ್ಯದರ್ಶಿ ಮಹಾವೀರ್ ಜೈನ್ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte